ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ಸಂಖ್ಯೆ : ಸ.ಶಿ.ಅ/ಹೆ.ಶಿ/ಕೆ.ಜಿ.ಬಿ.ವಿ/ಮಾರ್ಗಸೂಚಿ/2011-12 — ದಿನಾಂಕ: 06.06.2011

## ಸುತ್ತೋಲೆ

**ವಿಷಯ** : ಕಸ್ತೂರ ಬಾ ಗಾಂಧಿ ಬಾಲಿಕ ವಿದ್ಯಾಲಯಗಳ ಕಾರ್ಯಚಟುವಟಿಕೆ ಕುರಿತಂತೆ 2011-12 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಮಾರ್ಗಸೂಚಿ.

**ಉಲ್ಲೇಖ** : ದಿನಾಂಕ : 28-02-2011 ರಂದು ನವದೆಹಲಿಯಲ್ಲಿ ನಡೆದ ಸರ್ವ ಶಿಕ್ಷಣ ಅಭಿಯಾನ ಯೋಜನಾ ಅನುಮೋದನಾ ಮಂಡಳಿ ಸಭೆ.

*~*~*~*~*~*

2011-12 ನೇ ಸಾಲಿನಲ್ಲಿ ಉಲ್ಲೇಖಿತ ಸಭೆಯ ನಡವಳಿಯಂತೆ, ಕೆ.ಜಿ.ಬಿ.ವಿ. ಯೋಜನೆಯಡಿ, ರಾಜ್ಯದ 71 ಕೆ.ಜಿ.ಬಿ.ವಿ. ಶಾಲೆಗಳ ನಿರ್ವಹಣೆಗಾಗಿ ಒಟ್ಟು ರೂ 2418.82 ಲಕ್ಷ ಅನುಮೋದನೆಯಾಗಿದ್ದು, ಇದರಲ್ಲಿ ರೂ. 2260.670 ಲಕ್ಷಗಳ ಆವರ್ತಕ ವೆಚ್ಚಕ್ಕಾಗಿ ಹಾಗೂ ರೂ. 152.50 ಲಕ್ಷ ಅನಾವರ್ತಕ ವೆಚ್ಚಕ್ಕಾಗಿ ನಿಗದಿಯಾಗಿದೆ. ಇಲಾಖೆ ನಿರ್ವಹಿಸಲ್ಪಡುವ 39 ಕೆ.ಜಿ.ಬಿ.ವಿ.ಗಳಿಗೆ (4 ನೂತನ ಕೆ.ಜಿ.ಬಿ.ವಿ. ಒಳಗೊಂಡು) ಒಟ್ಟು ರೂ 1342.43 ಲಕ್ಷ ಅನುಮೋದನೆಯಾಗಿದೆ. ಕೆ.ಜಿ.ಬಿ.ವಿ. ವಾರು ಅನುಮೋದಿತ ಅನುದಾನದ ವಿವರಗಳನ್ನು ಅನುಬಂಧ-1ಎ ರಲ್ಲಿ ನೀಡಿದ್ದು, ಅನುಮೋದಿತ ಅನುದಾನವನ್ನು ಕೆ.ಜಿ.ಬಿ.ವಿ.ಗಳ ಅವಶ್ಯಕತೆ ಆಧಾರಿತವಾಗಿ ಸರ್ವ ಶಿಕ್ಷಣ ಅಭಿಯಾನದ ಅನುಷ್ಠಾನಕ್ಕಾಗಿ ಜಿಲ್ಲೆಗಳಿಗೆ ಬಿಡುಗಡೆ ಮಾಡುವ ಅನುದಾನ/ಉಳಿಕೆ ಅನುದಾನದಿಂದ ತಕ್ಷಣ ಬಿಡುಗಡೆ ಮಾಡಿ, ಕೆ.ಜಿ.ಬಿ.ವಿ ಕಾರ್ಯಕ್ರಮ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು. ಕೆ.ಜಿ.ಬಿ.ವಿ.ಗಳಲ್ಲಿಯೇ ಅನುದಾನ ಲಭ್ಯತೆ ಇದ್ದರೆ ಅದೇ ಅನುದಾನವನ್ನು ಉಪಯೋಗಿಸಿಕೊಂಡು ಕಾರ್ಯಕ್ರಮ ಅನುಷ್ಠಾನ ಮಾಡಲು ಸೂಚಿಸಿದೆ.

2. ಮಹಿಳಾ ಸಮಖ್ಯಾ ನಿರ್ವಹಿಸಲ್ಪಡುವ 32 ಕೆ.ಜಿ.ಬಿ.ವಿ.ಗಳಿಗೆ (3 ನೂತನ ಕೆ.ಜಿ.ಬಿ.ವಿ ಒಳಗೊಂಡು) ಒಟ್ಟು ರೂ. 1074.29 ಲಕ್ಷ ಅನುಮೋದನೆಯಾಗಿದೆ (ವಿವರಗಳನ್ನು ಅನುಬಂಧ-1ಬಿ ರಲ್ಲಿ ನೀಡಿದೆ). ಇದರಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಅನುಮೋದನೆಯಾದ ರೂ 6 ಲಕ್ಷ, ಪೂರ್ಣ ಕಾಲಿಕ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ ವೇತನ ಪಾವತಿಗಾಗಿ ಪ್ರತಿ ಕೆ.ಜಿ.ಬಿ.ವಿ.ಗೆ ರೂ 6 ಲಕ್ಷದಂತೆ 32 ಕೆ.ಜಿ.ಬಿ.ವಿ.ಗಳಿಗೆ ಒಟ್ಟು ರೂ 192 ಲಕ್ಷದಂತೆ ಒಟ್ಟು ರೂ.198 ಲಕ್ಷ ಹೊರತುಪಡಿಸಿ, ಒಟ್ಟು ರೂ. 876.29 ಲಕ್ಷ ಅನುದಾನವನ್ನು ಈ ಕಛೇರಿಯಿಂದ ಮಹಿಳಾ ಸಮಖ್ಯಾ ಕೇಂದ್ರ ಕಛೇರಿಗೆ ಬಿಡುಗಡೆ ಮಾಡಲಾಗುವುದು. ಮಹಿಳಾ ಸಮಖ್ಯಾ ನಿರ್ವಹಣೆಯ ಕೆ.ಜಿ.ಬಿ.ವಿ.ಗಳ ನಿರ್ವಹಣೆಗಾಗಿ ಅಗತ್ಯ ಅನುದಾನವನ್ನು ಮಹಿಳಾ ಸಮಖ್ಯಾ ಕೇಂದ್ರ ಕಛೇರಿಯು ಬಿಡುಗಡೆ ಮಾಡುತ್ತದೆ.

3. ವಿವಿಧ ಶೀರ್ಷಿಕೆಗಳಲ್ಲಿ ಕೈಗೊಳ್ಳಬೇಕಾದ ಖರ್ಚು-ವೆಚ್ಚ ಕುರಿತು ಸ್ಪಷ್ಟ ಮಾರ್ಗಸೂಚಿ ಹಾಗೂ ಕೆ.ಜಿ.ಬಿ.ವಿ.ಶಾಲಾ ಸಂಘಟನೆ ಕುರಿತ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಿದ್ದು, ಅದರಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.

4. ಪ್ರತಿ ಕೆ.ಜಿ.ಬಿ.ವಿ.ಯು ಆವರ್ತಕ ಮತ್ತು ಅನಾವರ್ತಕ ಅನುದಾನವನ್ನು ಖರ್ಚು ಮಾಡಲು ವಿವರವಾದ ಒಂದು ಯೋಜನೆಯನ್ನು ಜೂನ್ ತಿಂಗಳಿನಲ್ಲಿಯೇ ತಯಾರಿಸಿ, ಎಸ್.ಡಿ.ಎಂ.ಸಿ.ಯಲ್ಲಿಟ್ಟು ಅನುಮೋದನೆ ಪಡೆಯುವುದು. ಈ ಸಮಿತಿ ಪ್ರತಿ ತಿಂಗಳು ಸಭೆ ಸೇರಿ ಪ್ರಗತಿ ಪರಿಶೀಲಿಸಿ, ಹಿಮ್ಮಾಹಿತಿ ನೀಡತಕ್ಕದ್ದು. ಈ ಯೋಜನೆಯು ವಿವಿಧ ಕಾರ್ಯಕ್ರಮಗಳ ಹೆಸರು ; ಈ ಕಾರ್ಯಕ್ರಮಗಳ ಸಂಬಂಧ ಯಾವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ ; ಯಾವಾಗ ಹಮ್ಮಿಕೊಳ್ಳಲಾಗುತ್ತದೆ ; ಯಾವ ಸ್ಥಳದಲ್ಲಿ ; ಯಾವ ದಿನಾಂಕ ; ಯಾರು ಹಮ್ಮಿಕೊಳ್ಳುತ್ತಾರೆ ; ಖರ್ಚಾಗುವ ಹಣ ಇತ್ಯಾದಿ ಅಂಶಗಳು ಇರುವಂತೆ ರಚಿಸತಕ್ಕದ್ದು.

5. ಎಲ್ಲಾ ರೀತಿಯ ಖರೀದಿಗಳಿಗೆ ಸಂಬಂಧಿಸಿದ ಅನುಮೋದನೆಯನ್ನು ಕೆ.ಜಿ.ಬಿ.ವಿ.ಯ ಎಸ್.ಡಿ.ಎಂ.ಸಿ ಸಭೆಯಲ್ಲಿ ಚರ್ಚಿಸಿ, ಅನುಮೋದನೆಯನ್ನು ಪಡೆದು, ಕಾರ್ಯಪ್ರವೃತ್ತರಾಗುವುದು.

6. ಇಲಾಖೆಯ ನಿರ್ವಹಣೆಯ 4 ನೂತನ ಕೆ.ಜಿ.ಬಿ.ವಿ.ಗಳಲ್ಲಿ ಕೆ.ಜಿ.ಬಿ.ವಿ.ಯ ಮುಖ್ಯ ಶಿಕ್ಷಕರು ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಜಂಟಿ ಖಾತೆ ತೆರೆಯುವುದು. ನೂತನ ಕೆ.ಜಿ.ಬಿ.ವಿ.ಗಳಲ್ಲಿ ಎಸ್.ಡಿ.ಎಂಸಿ. ಅಸ್ತಿತ್ವದಲ್ಲಿಲ್ಲದೆ ಇರುವುದರಿಂದ ಮುಂದಿನ ಆದೇಶವಾಗುವವರೆಗೆ ಎಲ್ಲಾ ರೀತಿಯ ಖರೀದಿಗಳಿಗೆ ಸಂಬಂಧಿಸಿದ ಅನುಮೋದನೆಯನ್ನು ಜಿಲ್ಲಾ ಖರೀದಿ ಸಮಿತಿಯ ಅನುಮೋದನೆಯನ್ನು ಪಡೆಯುವುದು.

7. ಕೆ.ಜಿ.ಬಿ.ವಿ.ಯಲ್ಲಿ ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳಿಗೆ ವೇಳಾಪಟ್ಟಿಯನ್ನು (calender of events) ಅನುಬಂಧ–3 ರಲ್ಲಿ ನೀಡಿದ್ದು, ವೇಳಾಪಟ್ಟಿಯಲ್ಲಿರುವ ದಿನಾಂಕದೊಳಗೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದು.

8. ಕೆ.ಜಿ.ಬಿ.ವಿ.ಗಳಲ್ಲಿ ಹೆಣ್ಣು ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡ್ ನಿರ್ಮಿಸಲು 13ನೇ ಜೆ.ಆರ್.ಎಂ. ನಡವಳಿಯು ಸೂಚಿಸಿರುವ ಹಿನ್ನೆಲೆಯಲ್ಲಿ ಕಾಂಪೌಂಡ್ ಇಲ್ಲದಿರುವ ಕೆ.ಜಿ.ಬಿ.ವಿ.ಗಳು ಆದ್ಯತೆಯ ಮೇರೆಗೆ ಕಾಂಪೌಂಡ್ ನಿರ್ಮಿಸಲು ಸೂಚಿಸಿದೆ.

9. ಕೆ.ಜಿ.ಬಿ.ವಿಯಲ್ಲಿ ಕಾರ್ಯನಿರ್ವಹಿಸುವ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರಿಗೆ ಡಯಟ್ ಮತ್ತು ಬಿ.ಆರ್.ಸಿ. ಗಳಿಂದ ನೀಡುವ ಎಲ್ಲಾ ತರಬೇತಿಗಳಿಗೆ ನಿಯೋಜಿಸಬೇಕು. ಈ ರೀತಿ ನಿಯೋಜಿಸುವಾಗ ಶಿಕ್ಷಕರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕೆ.ಜಿ.ಬಿ.ವಿ.ಗಳಿಗೆ ಅಗತ್ಯ ಶೈಕ್ಷಣಿಕ ಬೆಂಬಲವನ್ನು (ವಿದ್ಯಾರ್ಥಿನಿಯರ ಕಲಿಕೆ/ವ್ಯಕ್ತಿತ್ವದ ವಿಕಾಸ/ಶಿಕ್ಷಕರ ಬೋಧನೆ ಇತ್ಯಾದಿ) ಡಯಟ್‌ಗಳು ಒದಗಿಸಬೇಕು. 13ನೇ ಜೇ.ಆರ್.ಎಂ.ನಡವಳಿಯಲ್ಲಿ ಸೂಚಿಸಿರುವಂತೆ ಕೆ.ಜಿ.ಬಿ.ವಿ. ವಸತಿ ಶಾಲೆಯ ನಿರ್ವಹಣೆ ಮತ್ತು ಬೋಧನಾ ಅವಶ್ಯಕತೆಗಳು, ಸವಾಲುಗಳು ಹಾಗೂ ಅವಕಾಶಗಳ ಕುರಿತು ತರಬೇತಿಯನ್ನು ಕೆ.ಜಿ.ಬಿ.ವಿ. ಸಿಬ್ಬಂದಿಗೆ ನೀಡಲು ಅಗತ್ಯ ಕ್ರಮವನ್ನು ಡಯಟ್‌ಗಳು ತೆಗೆದುಕೊಳ್ಳಬೇಕು. ಇದಕ್ಕಾಗಿ ಶಿಕ್ಷಕರ ತರಬೇತಿಯಡಿ ಲಭ್ಯ ಇರುವ ಅನುದಾನವನ್ನು ಬಳಸಿಕೊಳ್ಳಲು ಸೂಚಿಸಿದೆ.

10. ಡಯಟ್ ನೋಡಲ್ ಅಧಿಕಾರಿಗಳು ತಮ್ಮ ಬ್ಲಾಕ್‌ನ ಭೇಟಿಯಲ್ಲಿ ಕೆ.ಜಿ.ಬಿ.ವಿ.ಗಳಿಗೆ ತಪ್ಪದೇ ಭೇಟಿ ನೀಡಿ, ಅಗತ್ಯ ಶೈಕ್ಷಣಿಕ ಬೆಂಬಲ ಒದಗಿಸಬೇಕು. ಜಿಲ್ಲೆಯ ಎಲ್ಲಾ ಅಧಿಕಾರಿಗಳು ಆದ್ಯತೆಯ ಮೇರೆಗೆ ಕೆ.ಜಿ.ಬಿ.ವಿ.ಗೆ ಭೇಟಿ ನೀಡಿ, ಮಾರ್ಗದರ್ಶನ ನೀಡಬೇಕು. ಭೇಟಿಯ ವರದಿಗಾಗಿ ಕೆ.ಜಿ.ಬಿ.ವಿ. ಶಿಕ್ಷಕರ ಕೈಪಿಡಿ ಪುಟ ಸಂಖ್ಯೆ 115 ರಿಂದ 122 ರಲ್ಲಿ ಮುದ್ರಿಸಿರುವ ನಮೂನೆ ಉಪಯೋಗಿಸಿಕೊಳ್ಳಬೇಕು.

11. ಇಲಾಖೆಯ ನಿರ್ವಹಣೆಯ ಕೆ.ಜಿ.ಬಿ.ವಿ.ಗಳ ಸಂಪೂರ್ಣ ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಯು ಸಂಬಂಧಿಸಿದ ಬಿ.ಇ.ಓ ಮತ್ತು ಬಿ.ಆರ್.ಸಿ.ಗಳದ್ದಾಗಿದ್ದು, ಇಲಾಖೆಯ ಮಹತ್ವದ ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಈ ಅಧಿಕಾರಿಗಳು ವೈಯುಕ್ತಿಕವಾಗಿ ಗಮನಹರಿಸುವುದು. ಕೆ.ಜಿ.ಬಿ.ವಿ.ಗಳಲ್ಲಿ ಉದ್ಭವಿಸುವ ಸಣ್ಣಪುಟ್ಟ ಸಮಸ್ಯೆಗಳಿಗೆ ಪರಿಹಾರವನ್ನು ಸ್ಥಳೀಯವಾಗಿ ಕಂಡುಕೊಳ್ಳುವುದು. ಚಿಕ್ಕಪುಟ್ಟ ವಿಷಯಗಳಿಗೆ ಸ್ಪಷ್ಟೀಕರಣ ಕೋರಿ ಈ ಕಛೇರಿಗೆ ಪತ್ರ ಬರೆಯದೆ ಜಿಲ್ಲಾ ಹಂತದ ಅಧಿಕಾರಿಗಳನ್ನು ಸಂಪರ್ಕಿಸಿ, ಪರಿಹರಿಸಿಕೊಳ್ಳುವುದು.

12. ಮಹಿಳಾ ಸಮಖ್ಯಾ ನಿರ್ವಹಣೆಯ ಕೆ.ಜಿ.ಬಿ.ವಿ.ಗಳ ನಿರ್ವಹಣೆ ಹಾಗೂ ಉಸ್ತುವಾರಿ ಮಹಿಳಾ ಸಮಖ್ಯಾ ಸಂಸ್ಥೆಯದೇ ಆಗಿದೆ. ಆದಾಗ್ಯೂ ವಿದ್ಯಾರ್ಥಿನಿಯರ ದಾಖಲಾತಿ, ಹಾಜರಾತಿ, ಶಿಕ್ಷಕರ ನಿಯೋಜನೆ, ಕಟ್ಟಡ ನಿರ್ಮಾಣ/ದುರಸ್ತಿ ಇತ್ಯಾದಿ ಸಮಸ್ಯೆಗಳ ಪರಿಹಾರಕ್ಕೆ ಇಲಾಖೆಯ ಅಧಿಕಾರಿಗಳು ಮಹಿಳಾ ಸಮಖ್ಯಾ ಸಂಸ್ಥೆಗೆ ಪೂರ್ಣ ಸಹಕಾರ ನೀಡುವುದು. ಮಹಿಳಾ ಸಮಖ್ಯಾ ನಿರ್ವಹಣೆಯ ಕೆ.ಜಿ.ಬಿ.ವಿ.ಗಳಿಗೆ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳು ಕಾಲಕಾಲಕ್ಕೆ ಭೇಟಿ ನೀಡಿ, ಶೈಕ್ಷಣಿಕ ಮಾರ್ಗದರ್ಶನ/ಬೆಂಬಲ ನೀಡುವುದು. ಜಿಲ್ಲಾ ಹಂತದಲ್ಲಿ ಮಹಿಳಾ ಸಮಖ್ಯಾ ಅಧಿಕಾರಿ/ಸಿಬ್ಬಂದಿಗಳೊಂದಿಗೆ ಮಾಸಿಕವಾಗಿ ಸಮನ್ವಯ ಸಭೆಗಳನ್ನು ನಡೆಸುವುದು.

13. ವಿದ್ಯಾರ್ಥಿನಿಯರ ದಾಖಲಾತಿ ಮತ್ತು ಹಾಜರಾತಿ ಕುರಿತ ವರದಿಯನ್ನು ಅನುಬಂಧ -4 ರಂತೆ ಮಾಸಿಕವಾಗಿ ಈ ಕಛೇರಿಗೆ ಜಿಲ್ಲಾ ಕಛೇರಿಗಳು ಕೆ.ಜಿ.ಬಿ.ವಿ.ಗಳಿಂದ ಪಡೆದು, ಸಲ್ಲಿಸುವುದು.

14. ಕೆ.ಜಿ.ಬಿ.ವಿ.ಯ ಆರ್ಥಿಕ ಪ್ರಗತಿಯನ್ನು ಅನುಬಂಧ-5 ರಂತೆ ಮಾಸಿಕವಾಗಿ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ಜಿಲ್ಲಾ ಕಛೇರಿಗಳು ಕೆ.ಜಿ.ಬಿ.ವಿ.ಗಳಿಂದ ಪಡೆದು ಈ ಕಛೇರಿಗೆ ಇ ಮೇಲ್ ಮೂಲಕ ಸಲ್ಲಿಸುವುದು. ಮಹಿಳಾ ಸಮಖ್ಯಾ ಕೇಂದ್ರ ಕಛೇರಿಯು ತಮ್ಮ ವ್ಯಾಪ್ತಿಯ ಕೆ.ಜಿ.ಬಿ.ವಿ.ಗಳ ಪ್ರಗತಿ ವರದಿಯನ್ನು ಕೆ.ಜಿ.ಬಿ.ವಿ.ಗಳಿಂದ ಪಡೆದು, ಕ್ರೋಢೀಕರಿಸಿ, ಈ ಕಛೇರಿಗೆ ಸಲ್ಲಿಸುವುದು. ಮಹಿಳಾ ಸಮಖ್ಯಾ ನಿರ್ವಹಣೆಯ ಕೆ.ಜಿ.ಬಿ.ವಿ.ಗಳು ತಮ್ಮ ಪ್ರಗತಿ ವರದಿಯ ಒಂದು ಪ್ರತಿಯನ್ನು ಸಂಬಂಧಿಸಿದ ಬ್ಲಾಕ್‌ನ ಬಿ.ಇ.ಓ ಮತ್ತು ಬಿ.ಆರ್.ಸಿ ಹಾಗೂ ಜಿಲ್ಲೆಯ ಡಿ.ಡಿ.ಪಿ.ಐ ಮತ್ತು ಡಿವೈಪಿಸಿ. ಗಳಿಗೆ ಸಲ್ಲಿಸುವುದು.

15. ಎಲ್ಲಾ ಕೆ.ಜಿ.ಬಿ.ವಿ.ಗಳಲ್ಲಿ ಕಡ್ಡಾಯವಾಗಿ ಗೈಡ್ಸ್ ಮತ್ತು ಸೇವಾದಳ ಘಟಕಗಳನ್ನು ಸ್ಥಾಪಿಸುವುದು. ಇದಕ್ಕಾಗಿ ಸಂಬಂಧಿಸಿದ ಜಿಲ್ಲಾ ಘಟಕಗಳನ್ನು ಸಂಪರ್ಕಿಸುವುದು. ಈ ಘಟಕಗಳ ಸ್ಥಾಪನೆಗೆ ಸಂಬಂಧಿಸಿದ ನೋಂದಣಿ ಶುಲ್ಕವನ್ನು ಕೆ.ಜಿ.ಬಿ.ವಿ.ಯ 'ನಿರ್ವಹಣೆ ಒಳಗೊಂಡಂತೆ ಇತರೆ ವೆಚ್ಚ' ಶೀರ್ಷಿಕೆಯಡಿ ಭರಿಸಲು ಸೂಚಿಸಿದೆ. ಕೆ.ಜಿ.ಬಿ.ವಿ.ಯ ಒಬ್ಬ ಶಿಕ್ಷಕರನ್ನು ಈ ಘಟಕಗಳ ಉಸ್ತುವಾರಿಗೆ ನೇಮಿಸುವುದು. ಈ ಶಿಕ್ಷಕರ ತರಬೇತಿಗೆ ಸಂಬಂಧಿಸಿದ ಅನುದಾನವನ್ನು ಶಿಕ್ಷಕರ ತರಬೇತಿಯಲ್ಲಿ ಭರಿಸಲು ಡಯಟ್‌ಗಳಿಗೆ ಸೂಚಿಸಿದೆ.

(ಸಹಿ)
**ನಿರ್ದೇಶಕರು (ಕಾರ್ಯಕ್ರಮಗಳು)**
**ಸರ್ವ ಶಿಕ್ಷಣ ಅಭಿಯಾನ**

**ಮುಂದಿನ ಕ್ರಮಕ್ಕಾಗಿ**

1. ಸಂಬಂಧಿಸಿದ ಡಿ.ಡಿ.ಪಿ.ಐ., ಡಯಟ್ ಪ್ರಾಂಶುಪಾಲರು, ಡಿವೈಪಿಸಿ., ಬಿಇಓ, ಬಿಆರ್‌ಸಿ.ಗಳು ಮತ್ತು ಕೆ.ಜಿ.ಬಿ.ವಿ. ಮುಖ್ಯ ಶಿಕ್ಷಕರಿಗೆ
2. ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, ಬೆಂಗಳೂರು.

**ಅನುಪಾಲನೆಗಾಗಿ**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ.
2. ಸಂಬಂಧಿಸಿದ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
3. ಈ ಕಛೇರಿಯ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ

**ಇವರಿಗೆ ಮಾಹಿತಿಗೆ ಸಲ್ಲಿಸಿದೆ :**

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬೆಂಗಳೂರು ವಂದನೆಗಳೊಂದಿಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು - ವಂದನೆಗಳೊಂದಿಗೆ ಸಲ್ಲಿಸಿದೆ.

ಅನುಬಂಧ-1 ಎ

2011-12 ನೇ ಸಾಲಿನಲ್ಲಿ ಇಲಾಖೆಯ ನಿರ್ವಹಣೆಯ ಕೆ.ಜಿ.ಬಿ.ವಿ.ಗಳ ಅನುಮೋದಿತ ಅನುದಾನದ ವಿವರ

| | District | | Bagalkot | | | Belgaum | | Chamarajanagar | Chikkodi | | Bellary | | | Chikkaballapur | | | | Chitradurga | | Davangere | Dharwad | | Gadag | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | Blocks | | Badami | Hunagund | Jamkhandi | Ramdurga | Savadatti | Yalanduru | Mudalagi | Raibag | Hospet | Sandur | Siruguppa | Gowribidanur | Chintamani | Bagepalli | Gudibande | Challakere | Molkalmuru | Harapanahalli | Kalagatagi | Dharwad | Mundaragi | Ron |
| | No of Girls to be Enrolled | | 150 | 100 | 150 | 150 | 150 | 100 | 150 | 100 | 100 | 100 | 100 | 150 | 100 | 100 | 150 | 100 | 150 | 100 | 100 | 100 | 100 | 100 |
| 25 | **KGBV Financial Provisions per school** | Unit Cost | | | | | | | | | | | | | | | | | | | | | | |
| | **Non-recurring (one time grant)** | | | | | | | | | | | | | | | | | | | | | | | |
| 25.01 | Construction of Building (New) | 2.0 | 0 | 0 | 0 | 0 | 0 | 2 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 25.08 | Electricity/water charges (New) | 0.002 | 0.1 | 0 | 0.1 | 0.1 | 0.1 | 0 | 0.1 | 0 | 0 | 0 | 0 | 0.1 | 0 | 0 | 0.1 | 0 | 0.1 | 0 | 0 | 0 | 0 | 0 |
| 25.10 | Furniture / Equipment (including kitchen equipment) (New) | 0.03 | 1.5 | 0 | 1.5 | 1.5 | 1.5 | 0 | 1.5 | 0 | 0 | 0 | 0 | 1.5 | 0 | 0 | 1.5 | 0 | 1.5 | 0 | 0 | 0 | 0 | 0 |
| 25.11 | Furniture / Equipment (including kitchen equipment) (Variation on account of change of unit cost) | 0.005 | 0 | 0 | 0 | 0 | 0 | 2.5 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 25.12 | TLM and equipment including library books (New) | 0.035 | 1.75 | 0 | 1.75 | 1.75 | 1.75 | 3.5 | 1.75 | 0 | 0 | 0 | 0 | 1.75 | 0 | 0 | 1.75 | 0 | 1.75 | 0 | 0 | 0 | 0 | 0 |
| 25.14 | Bedding (New) | 0.0075 | 0.375 | 0 | 0.375 | 0.375 | 0.375 | 0.75 | 0.375 | 0 | 0 | 0 | 0 | 0.375 | 0 | 0 | 0.375 | 0 | 0.375 | 0 | 0 | 0 | 0 | 0 |
| 25.16 | Replacement of bedding (once in 3 years) | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0.75 | 0 | 0 | 0 | 0 |
| | **Sub Total Non-recurring** | | 3.725 | 0 | 3.725 | 3.725 | 3.725 | 8.75 | 3.725 | 0 | 0 | 0 | 0 | 3.725 | 0 | 0 | 3.725 | 0 | 3.725 | 0.75 | 0 | 0 | 0 | 0 |
| | **Recurring** | | | | | | | | | | | | | | | | | | | | | | | |
| 25.17 | Maintenance per girl Per month @ Rs.900/- | 0.108 | 16.2 | 10.8 | 16.2 | 16.2 | 16.2 | 10.8 | 16.2 | 10.8 | 10.8 | 10.8 | 10.8 | 16.2 | 10.8 | 10.8 | 16.2 | 10.8 | 16.2 | 10.8 | 10.8 | 10.8 | 10.8 | 10.8 |
| 25.18 | Stipend per girl per month @ Rs.50/- | 0.006 | 0.9 | 0.6 | 0.9 | 0.9 | 0.9 | 0.6 | 0.9 | 0.6 | 0.6 | 0.6 | 0.6 | 0.9 | 0.6 | 0.6 | 0.9 | 0.6 | 0.9 | 0.6 | 0.6 | 0.6 | 0.6 | 0.6 |
| 25.19 | Supplementary TLM, Stationery and other educational material | 0.006 | 0.9 | 0.6 | 0.9 | 0.9 | 0.9 | 0.6 | 0.9 | 0.6 | 0.6 | 0.6 | 0.6 | 0.9 | 0.6 | 0.6 | 0.9 | 0.6 | 0.9 | 0.6 | 0.6 | 0.6 | 0.6 | 0.6 |
| 25.20 | Examination Fee | 0.02 | 0.03 | 0.02 | 0.03 | 0.03 | 0.03 | 0.02 | 0.03 | 0.02 | 0.02 | 0.02 | 0.02 | 0.03 | 0.02 | 0.02 | 0.03 | 0.02 | 0.03 | 0.02 | 0.02 | 0.02 | 0.02 | 0.02 |
| 25.21 | Salaries | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 |
| | Addl. Salary for HM (@ Rs. 20000/- pm, addl. Teacher (@ Rs. 15000/- pm and addl. Asstt. Cook @ Rs. 4500/- p.m. | 4.74 | 4.74 | 0 | 4.74 | 4.74 | 4.74 | 0 | 4.74 | 0 | 0 | 0 | 0 | 4.74 | 0 | 0 | 4.74 | 0 | 4.74 | 0 | 0 | 0 | 0 | 0 |
| 25.22 | Vocational training / specific skill training | 0.005 | 0.75 | 0.5 | 0.75 | 0.75 | 0.75 | 0.5 | 0.75 | 0.5 | 0.5 | 0.5 | 0.5 | 0.75 | 0.5 | 0.5 | 0.75 | 0.5 | 0.75 | 0.5 | 0.5 | 0.5 | 0.5 | 0.5 |
| 25.23 | Electricity / water charges | 0.006 | 0.9 | 0.6 | 0.9 | 0.9 | 0.9 | 0.6 | 0.9 | 0.6 | 0.6 | 0.6 | 0.6 | 0.9 | 0.6 | 0.6 | 0.9 | 0.6 | 0.9 | 0.6 | 0.6 | 0.6 | 0.6 | 0.6 |
| 25.24 | Medical care/contingencies @ Rs.750/- per girl. | 0.0075 | 1.125 | 0.75 | 1.125 | 1.125 | 1.125 | 0.75 | 1.125 | 0.75 | 0.75 | 0.75 | 0.75 | 1.125 | 0.75 | 0.75 | 1.125 | 0.75 | 1.125 | 0.75 | 0.75 | 0.75 | 0.75 | 0.75 |
| 25.25 | Maintenance Miscellaneous | 0.004 | 0.6 | 0.4 | 0.6 | 0.6 | 0.6 | 0.4 | 0.6 | 0.4 | 0.4 | 0.4 | 0.4 | 0.6 | 0.4 | 0.4 | 0.6 | 0.4 | 0.6 | 0.4 | 0.4 | 0.4 | 0.4 | 0.4 |
| 25.26 | Miscellaneous | 0.004 | 0.6 | 0.4 | 0.6 | 0 | 0 | 0.4 | 0 | 0 | 0.4 | 0.4 | 0.4 | 0.6 | 0.4 | 0.4 | 0.6 | 0.4 | 0.6 | 0.4 | 0.4 | 0.4 | 0.4 | 0.4 |
| 25.27 | Preparatory camps | 0.0015 | 0.225 | 0.15 | 0.225 | 0.225 | 0.225 | 0.15 | 0.225 | 0.15 | 0.15 | 0.15 | 0.15 | 0.225 | 0.15 | 0.15 | 0.225 | 0.15 | 0.225 | 0.15 | 0.15 | 0.15 | 0.15 | 0.15 |
| 25.28 | P.T.A / school functions | 0.0015 | 0.225 | 0.15 | 0.225 | 0.225 | 0.225 | 0.15 | 0.225 | 0.15 | 0.15 | 0.15 | 0.15 | 0.225 | 0.15 | 0.15 | 0.225 | 0.15 | 0.225 | 0.15 | 0.15 | 0.15 | 0.15 | 0.15 |
| 25.29 | Provision of Rent (8 months) | 4.8 | 0 | 0 | 0 | 0 | 0 | 4.8 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 25.30 | Capacity Building | 0.003 | 0.45 | 0.3 | 0.45 | 0.45 | 0.45 | 0.3 | 0.45 | 0.3 | 0.3 | 0.3 | 0.3 | 0.45 | 0.3 | 0.3 | 0.45 | 0.3 | 0.45 | 0.3 | 0.3 | 0.3 | 0.3 | 0.3 |
| | **Sub Total Recurring** | | 39.645 | 27.27 | 39.645 | 39.045 | 39.045 | 32.07 | 39.045 | 26.87 | 27.27 | 27.27 | 27.27 | 39.645 | 27.27 | 27.27 | 39.645 | 27.27 | 39.645 | 27.27 | 27.27 | 27.27 | 27.27 | 27.27 |
| | **Total - KGBV** | | 43.37 | 27.27 | 43.37 | 42.77 | 42.77 | 40.82 | 42.77 | 26.87 | 27.27 | 27.27 | 27.27 | 43.37 | 27.27 | 27.27 | 43.37 | 27.27 | 43.37 | 28.02 | 27.27 | 27.27 | 27.27 | 27.27 |

೨೦೧೧-೧೨ ನೇ ಸಾಲಿನಲ್ಲಿ ಆರಂಭಿಸಲು ನಿರ್ಧರಿಸಿದ ಕೆ.ಜಿ.ಬಿ.ವಿ.ಗಳ ಅನುಮೋದಿತ ಅನುದಾನದ ವಿವರ

| | District | Gulbarga | Hassan | Kolar | | | Koppal | Mandya | | Mysore | | Raichur | | Ramanagar | Tumkur | Yadgiri | | | Grand Total |
|---|---|---|---|---|---|---|---|---|---|---|---|---|---|---|---|---|---|---|---|
| | Blocks | sedam | Holenarsipura | Bangarapet | Mulbagilu | Srinivasapur | Urdu Gangava | Malavalli | Pandavapura | K.R.Nagar | T. Narasipur | Urdu Sindano | Sindanoor | Channapatna | Madhugiri | Shahapur | Shorapur | Yadgiri | |
| | No of Girls to be Enrolled | 150 | 100 | 100 | 100 | 100 | 150 | 100 | 100 | 100 | 100 | 100 | 100 | 100 | 150 | 150 | 150 | 150 | 4600 |
| 25 | **KGBV Financial Provisions per school** | | | | | | | | | | | | | | | | | | 0.00 |
| | **Non-recurring (one time grant)** | | | | | | | | | | | | | | | | | | 0.00 |
| 25.01 | Construction of Building (New) | 0 | 0 | 0 | 0 | 0 | 0 | 2.00 | 2.00 | 0 | 2 | 0 | 0 | 0 | 0 | 0 | 0 | 0 | 8.00 |
| 25.08 | Electricity/water charges (New) | 0.1 | 0 | 0 | 0 | 0 | 0.1 | 0 | 0 | 0 | 0 | 0 | 0 | 0 | 0.1 | 0.1 | 0.1 | 0.1 | 1.40 |
| 25.10 | Furniture / Equipment (including kitchen equipment) (New) | 1.5 | 0 | 0 | 0 | 0 | 1.5 | 0 | 0 | 0 | 0 | 0 | 0 | 0 | 1.5 | 1.5 | 1.5 | 1.5 | 21.00 |
| 25.11 | Furniture / Equipment (including kitchen equipment) (Variation on account of change of unit cost) | 0 | 0 | 0 | 0 | 0 | 0 | 2.5 | 2.5 | 0 | 2.5 | 0 | 0 | 0 | 0 | 0 | 0 | 0 | 10.00 |
| 25.12 | TLM and equipment including library books (New) | 1.75 | 0 | 0 | 0 | 0 | 1.75 | 3.5 | 3.5 | 0 | 3.5 | 0 | 0 | 0 | 1.75 | 1.75 | 1.75 | 1.75 | 38.50 |
| 25.14 | Bedding (New) | 0.375 | 0 | 0 | 0 | 0 | 0.375 | 0.75 | 0.75 | 0 | 0.75 | 0 | 0 | 0 | 0.375 | 0.375 | 0.375 | 0.375 | 8.25 |
| 25.16 | Replacement of bedding (once in 3 years) | 0 | 0.75 | 0 | 0 | 0 | 0 | 0 | 0 | 0 | | 0 | 0 | 0 | 0 | 0 | 0 | 0 | 1.50 |
| | **Sub Total Non-recurring** | 3.725 | 0.75 | 0 | 0 | 0 | 3.725 | 8.75 | 8.75 | 0 | 8.75 | 0 | 0 | 0 | 3.725 | 3.725 | 3.725 | 3.725 | 88.65 |
| | **Recurring** | | | | | | | | | | | | | | | | | | |
| 25.17 | Maintenance per girl Per month @ Rs.900/- | 16.2 | 10.8 | 10.8 | 10.8 | 10.8 | 16.2 | 10.8 | 10.8 | 10.8 | 10.8 | 10.8 | 10.8 | 10.8 | 16.2 | 16.2 | 16.2 | 16.2 | 496.80 |
| 25.18 | Stipend per girl per month @ Rs.50/- | 0.9 | 0.6 | 0.6 | 0.6 | 0.6 | 0.9 | 0.6 | 0.6 | 0.6 | 0.6 | 0.6 | 0.6 | 0.6 | 0.9 | 0.9 | 0.9 | 0.9 | 27.60 |
| 25.19 | Supplementary TLM, Stationery and other educational material | 0.9 | 0.6 | 0.6 | 0.6 | 0.6 | 0.9 | 0.6 | 0.6 | 0.6 | 0.6 | 0.6 | 0.6 | 0.6 | 0.9 | 0.9 | 0.9 | 0.9 | 27.60 |
| 25.20 | Examination Fee | 0.03 | 0.02 | 0.02 | 0.02 | 0.02 | 0.03 | 0.02 | 0.02 | 0.02 | 0.02 | 0.02 | 0.02 | 0.02 | 0.03 | 0.03 | 0.03 | 0.03 | 0.92 |
| 25.21 | Salaries | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 468.00 |
| | Addl. Salary for HM (@ Rs. 20000/- pm, addl. Teacher (@ Rs. 15000/- pm and addl. Asstt. Cook @ Rs. 4500/- p.m. | 4.74 | 0 | 0 | 0 | 0 | 4.74 | 0 | 0 | 0 | 0 | 0 | 0 | 0 | 4.74 | 4.74 | 4.74 | 4.74 | 66.36 |
| 25.22 | Vocational training / specific skill training | 0.75 | 0.5 | 0.5 | 0.5 | 0.5 | 0.75 | 0.5 | 0.5 | 0.5 | 0.5 | 0.5 | 0.5 | 0.5 | 0.75 | 0.75 | 0.75 | 0.75 | 23.00 |
| 25.23 | Electricity / water charges | 0.9 | 0.6 | 0.6 | 0.6 | 0.6 | 0.9 | 0.6 | 0.6 | 0.6 | 0.6 | 0.6 | 0.6 | 0.6 | 0.9 | 0.9 | 0.9 | 0.9 | 27.60 |
| 25.24 | Medical care/contingencies @ Rs.750/- per girl. | 1.125 | 0.75 | 0.75 | 0.75 | 0.75 | 1.125 | 0.75 | 0.75 | 0.75 | 0.75 | 0.75 | 0.75 | 0.75 | 1.125 | 1.125 | 1.125 | 1.125 | 34.50 |
| 25.25 | Maintenance Miscellaneous | 0.6 | 0.4 | 0.4 | 0.4 | 0.4 | 0.6 | 0.4 | 0.4 | 0.4 | 0.4 | 0.4 | 0.4 | 0.4 | 0.6 | 0.6 | 0.6 | 0.6 | 18.40 |
| 25.26 | Miscellaneous | 0.6 | 0.4 | 0.4 | 0.4 | 0.4 | 0.6 | 0.4 | 0.4 | 0.4 | 0.4 | 0.4 | 0.4 | 0.4 | 0.6 | 0.6 | 0.6 | 0.6 | 16.20 |
| 25.27 | Preparatory camps | 0.225 | 0.15 | 0.15 | 0.15 | 0.15 | 0.225 | 0.15 | 0.15 | 0.15 | 0.15 | 0.15 | 0.15 | 0.15 | 0.225 | 0.225 | 0.225 | 0.225 | 6.90 |
| 25.28 | P.T.A / school functions | 0.225 | 0.15 | 0.15 | 0.15 | 0.15 | 0.225 | 0.15 | 0.15 | 0.15 | 0.15 | 0.15 | 0.15 | 0.15 | 0.225 | 0.225 | 0.225 | 0.225 | 6.90 |
| 25.29 | Provision of Rent (8 months) | 0 | 0 | 0 | 0 | 0 | 0 | 4.8 | 4.8 | 0 | 4.8 | 2.1 | 0 | 0 | 0 | 0 | 0 | 0 | 21.30 |
| 25.30 | Capacity Building | 0.45 | 0.3 | 0.3 | 0.3 | 0.3 | 0.45 | 0.3 | 0.3 | 0.3 | 0.3 | 0.3 | 0.3 | 0.3 | 0.45 | 0.45 | 0.45 | 0.45 | 13.80 |
| | **Sub Total Recurring** | 39.645 | 27.27 | 27.27 | 27.27 | 27.27 | 39.645 | 32.07 | 32.07 | 27.27 | 32.07 | 27.27 | 27.27 | 27.27 | 39.645 | 39.645 | 39.645 | 39.645 | 1253.78 |
| | **Total - KGBV** | 43.37 | 28.02 | 27.27 | 27.27 | 27.27 | 43.37 | 40.82 | 40.82 | 27.27 | 40.82 | 27.27 | 27.27 | 27.27 | 43.37 | 43.37 | 43.37 | 43.37 | 1342.43 |

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

5

ಅನುಬಂಧ-1 ಅ

2011-12 ನೇ ಸಾಲಿನಲ್ಲಿ ಮಹಿಳಾ ಸಮಖ್ಯಾ ನಿರ್ವಹಣೆಯ ಕೆ.ಜಿ.ಬಿ.ವಿ.ಗಳ ಅನುಮೋದಿತ ಅನುದಾನದ ವಿವರ

| | District | | Bagalkot | | | Bellary | | | Bidar | | | | Bijapur | | | | | |
|---|---|---|---|---|---|---|---|---|---|---|---|---|---|---|---|---|---|---|
| | Blocks | | Bagalkot | Bilagi | Mudhol | Moka | Kudligi | H.B. Halli | Bidar | Basavakalyan | Humanabad | Aurad | B.Bagewadi | Bijapur | Muddebihal | Sindagi | Indi | Afzalpur |
| | No of Girls to be Enrolled | | 150 | 150 | 150 | 150 | 100 | 100 | 150 | 150 | 150 | 150 | 100 | 100 | 100 | 100 | 100 | 100 |
| 25 | **KGBV Financial Provisions per school** | Unit Cost | | | | | | | | | | | | | | | | |
| | **Non-recurring (one time grant)** | | | | | | | | | | | | | | | | | |
| 25.01 | Construction of Building (New) | 2.0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 25.08 | Electricity/water charges (New) | 0.002 | 0.1 | 0.1 | 0.1 | 0.1 | 0 | 0 | 0.1 | 0.1 | 0.1 | 0.1 | 0 | 0 | 0 | 0 | 0 | 0 |
| 25.10 | Furniture / Equipment (including kitchen equipment) (New) | 0.03 | 1.5 | 1.5 | 1.5 | 1.5 | 0 | 0 | 1.5 | 1.5 | 1.5 | 1.5 | 0 | 0 | 0 | 0 | 0 | 0 |
| 25.11 | Furniture / Equipment (including kitchen equipment) (Variation on account of change of unit cost) | 0.005 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 25.12 | TLM and equipment including library books (New) | 0.035 | 1.75 | 1.75 | 1.75 | 1.75 | 0 | 0 | 1.75 | 1.75 | 1.75 | 1.75 | 0 | 0 | 0 | 0 | 0 | 0 |
| 25.14 | Bedding (New) | 0.0075 | 0.375 | 0.375 | 0.375 | 0.375 | 0 | 0 | 0.375 | 0.375 | 0.375 | 0.375 | 0 | 0 | 0 | 0 | 0 | 0 |
| 25.16 | Replacement of bedding (once in 3 years) | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | **Sub Total Non-recurring** | | **3.725** | **3.725** | **3.725** | **3.725** | **0** | **0** | **3.725** | **3.725** | **3.725** | **3.725** | **0** | **0** | **0** | **0** | **0** | **0** |
| | **Recurring** | | | | | | | | | | | | | | | | | |
| 25.17 | Maintenance per girl Per month @ Rs.900/- | 0.108 | 16.2 | 16.2 | 16.2 | 16.2 | 10.8 | 10.8 | 16.2 | 16.2 | 16.2 | 16.2 | 10.8 | 10.8 | 10.8 | 10.8 | 10.8 | 10.8 |
| 25.18 | Stipend per girl per month @ Rs.50/- | 0.006 | 0.9 | 0.9 | 0.9 | 0.9 | 0.6 | 0.6 | 0.9 | 0.9 | 0.9 | 0.9 | 0.6 | 0.6 | 0.6 | 0.6 | 0.6 | 0.6 |
| 25.19 | Supplementary TLM, Stationery and other educational material | 0.006 | 0.9 | 0.9 | 0.9 | 0.9 | 0.6 | 0.6 | 0.9 | 0.9 | 0.9 | 0.9 | 0.6 | 0.6 | 0.6 | 0.6 | 0.6 | 0.6 |
| 25.20 | Examination Fee | 0.02 | 0.03 | 0.03 | 0.03 | 0.03 | 0.02 | 0.02 | 0.03 | 0.03 | 0.03 | 0.03 | 0.02 | 0.02 | 0.02 | 0.02 | 0.02 | 0.02 |
| 25.21 | Salaries | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 |
| | Addl. Salary for HM (@ Rs. 20000/- pm, addl. Teacher (@ Rs. 15000/- pm and addl. Asstt. Cook @ Rs. 4500/- p.m. | 4.74 | 4.74 | 4.74 | 4.74 | 4.74 | 0 | 0 | 4.74 | 4.74 | 4.74 | 4.74 | 0 | 0 | 0 | 0 | 0 | 0 |
| 25.22 | Vocational training / specific skill training | 0.005 | 0.75 | 0.75 | 0.75 | 0.75 | 0.5 | 0.5 | 0.75 | 0.75 | 0.75 | 0.75 | 0.5 | 0.5 | 0.5 | 0.5 | 0.5 | 0.5 |
| 25.23 | Electricity / water charges | 0.006 | 0.9 | 0.9 | 0.9 | 0.9 | 0.6 | 0.6 | 0.9 | 0.9 | 0.9 | 0.9 | 0.6 | 0.6 | 0.6 | 0.6 | 0.6 | 0.6 |
| 25.24 | Medical care/contingencies @ Rs.750/- per girl. | 0.0075 | 1.125 | 1.125 | 1.125 | 1.125 | 0.75 | 0.75 | 1.125 | 1.125 | 1.125 | 1.125 | 0.75 | 0.75 | 0.75 | 0.75 | 0.75 | 0.75 |
| 25.25 | Maintenance Miscellaneous | 0.004 | 0.6 | 0.6 | 0.6 | 0.6 | 0.4 | 0.4 | 0.6 | 0.6 | 0.6 | 0.6 | 0.4 | 0.4 | 0.4 | 0.4 | 0.4 | 0.4 |
| 25.26 | Miscellaneous | 0.004 | 0.6 | 0.6 | 0.6 | 0.6 | 0.4 | 0.4 | 0.6 | 0.6 | 0.6 | 0.6 | 0.4 | 0.4 | 0.4 | 0.4 | 0.4 | 0.4 |
| 25.27 | Preparatory camps | 0.0015 | 0.225 | 0.225 | 0.225 | 0.225 | 0.15 | 0.15 | 0.225 | 0.225 | 0.225 | 0.225 | 0.15 | 0.15 | 0.15 | 0.15 | 0.15 | 0.15 |
| 25.28 | P.T.A / school functions | 0.0015 | 0.225 | 0.225 | 0.225 | 0.225 | 0.15 | 0.15 | 0.225 | 0.225 | 0.225 | 0.225 | 0.15 | 0.15 | 0.15 | 0.15 | 0.15 | 0.15 |
| 25.29 | Provision of Rent (8 months) | 4.8 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 25.30 | Capacity Building | 0.003 | 0.45 | 0.45 | 0.45 | 0.45 | 0.3 | 0.3 | 0.45 | 0.45 | 0.45 | 0.45 | 0.3 | 0.3 | 0.3 | 0.3 | 0.3 | 0.3 |
| | **Sub Total Recurring** | | 39.645 | 39.645 | 39.645 | 39.645 | 27.27 | 27.27 | 39.645 | 39.645 | 39.645 | 39.645 | 27.27 | 27.27 | 27.27 | 27.27 | 27.27 | 27.27 |
| | **Total - KGBV** | | 43.37 | 43.37 | 43.37 | 43.37 | 27.27 | 27.27 | 43.37 | 43.37 | 43.37 | 43.37 | 27.27 | 27.27 | 27.27 | 27.27 | 27.27 | 27.27 |

2011-12 ನೇ ಸಾಲಿನಲ್ಲಿ ಮಹಿಳಾ ಸಮಖ್ಯಾ ನಿರ್ವಹಣೆಯ ಕೆ.ಜಿ.ಬಿ.ವಿ.ಗಳ ಅನುಮೋದಿತ ಅನುದಾನದ ವಿವರ

| | District | Gulbarga | | | | | Koppal | | | | Mysore | | | Raichur | | | | State Grand Total |
|---|---|---|---|---|---|---|---|---|---|---|---|---|---|---|---|---|---|---|
| | Blocks | Aland | Chittapur | Chincholi | Gulbarga | Jewargi | Gangavathi | Koppal | Kustagi | Yelburga | Hunasuru | Mysore | Nanjanagudu | Raichur | Mallat | Devadurga | Ligasagur | |
| | No of Girls to be Enrolled | 100 | 150 | 150 | 100 | 100 | 100 | 100 | 100 | 100 | 100 | 100 | 100 | 100 | 100 | 100 | 100 | 3700 |
| 25 | **KGBV Financial Provisions per school** | | | | | | | | | | | | | | | | | 0 |
| | **Non-recurring (one time grant)** | | | | | | | | | | | | | | | | | 0 |
| 25.01 | Construction of Building (New) | 0 | 0 | 0 | 0 | 0 | 0 | 0 | 0 | 0 | 2 | 2 | 2 | 0 | 0 | 0 | 0 | 6 |
| 25.08 | Electricity/water charges (New) | 0 | 0.1 | 0.1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 |
| 25.10 | Furniture / Equipment (including kitchen equipment) (New) | 0 | 1.5 | 1.5 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 15 |
| 25.11 | Furniture / Equipment (including kitchen equipment) (Variation on account of change of unit cost) | 0 | 0 | 0 | 0 | 0 | 0 | 0 | 0 | 0 | 2.5 | 2.5 | 2.5 | 0 | 0 | 0 | 0 | 7.5 |
| 25.12 | TLM and equipment including library books (New) | 0 | 1.75 | 1.75 | 0 | 0 | 0 | 0 | 0 | 0 | 3.5 | 3.5 | 3.5 | 0 | 0 | 0 | 0 | 28 |
| 25.14 | Bedding (New) | 0 | 0.375 | 0.375 | 0 | 0 | 0 | 0 | 0 | 0 | 0.75 | 0.75 | 0.75 | 0 | 0 | 0 | 0 | 6 |
| 25.16 | Replacement of bedding (once in 3 years) | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| | **Sub Total Non-recurring** | 0 | 3.725 | 3.725 | 0 | 0 | 0 | 0 | 0 | 0 | 8.75 | 8.75 | 8.75 | 0 | 0 | 0 | 0 | 63.5 |
| | **Recurring** | | | | | | | | | | | | | | | | | |
| 25.17 | Maintenance per girl Per month @ Rs.900/- | 10.8 | 16.2 | 16.2 | 10.8 | 10.8 | 10.8 | 10.8 | 10.8 | 10.8 | 10.8 | 10.8 | 10.8 | 10.8 | 10.8 | 10.8 | 10.8 | 399.6 |
| 25.18 | Stipend per girl per month @ Rs.50/- | 0.6 | 0.9 | 0.9 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 22.2 |
| 25.19 | Supplementary TLM, Stationery and other educational material | 0.6 | 0.9 | 0.9 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 22.2 |
| 25.20 | Examination Fee | 0.02 | 0.03 | 0.03 | 0.02 | 0.02 | 0.02 | 0.02 | 0.02 | 0.02 | 0.02 | 0.02 | 0.02 | 0.02 | 0.02 | 0.02 | 0.02 | 0.74 |
| 25.21 | Salaries | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 12 | 384 |
| | Addl. Salary for HM (@ Rs. 20000/- pm, addl. Teacher (@ Rs. 15000/- pm and addl. Asstt. Cook @ Rs. 4500/- p.m. | 0 | 4.74 | 4.74 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 47.4 |
| 25.22 | Vocational training / specific skill training | 0.5 | 0.75 | 0.75 | 0.5 | 0.5 | 0.5 | 0.5 | 0.5 | 0.5 | 0.5 | 0.5 | 0.5 | 0.5 | 0.5 | 0.5 | 0.5 | 18.5 |
| 25.23 | Electricity / water charges | 0.6 | 0.9 | 0.9 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 0.6 | 22.2 |
| 25.24 | Medical care/contingencies @ Rs.750/- per girl. | 0.75 | 1.125 | 1.125 | 0.75 | 0.75 | 0.75 | 0.75 | 0.75 | 0.75 | 0.75 | 0.75 | 0.75 | 0.75 | 0.75 | 0.75 | 0.75 | 27.75 |
| 25.25 | Maintenance Miscellaneous | 0.4 | 0.6 | 0.6 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 14.8 |
| 25.26 | Miscellaneous | 0.4 | 0.6 | 0.6 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 0.4 | 14.8 |
| 25.27 | Preparatory camps | 0.15 | 0.225 | 0.225 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 5.55 |
| 25.28 | P.T.A / school functions | 0.15 | 0.225 | 0.225 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 0.15 | 5.55 |
| 25.29 | Provision of Rent (8 months) | 0 | 0 | 0 | 0 | 0 | 0 | 0 | 0 | 0 | 4.8 | 4.8 | 4.8 | 0 | 0 | 0 | 0 | 14.4 |
| 25.30 | Capacity Building | 0.3 | 0.45 | 0.45 | 0.3 | 0.3 | 0.3 | 0.3 | 0.3 | 0.3 | 0.3 | 0.3 | 0.3 | 0.3 | 0.3 | 0.3 | 0.3 | 11.1 |
| | **Sub Total Recurring** | 27.27 | 39.645 | 39.645 | 27.27 | 27.27 | 27.27 | 27.27 | 27.27 | 27.27 | 32.07 | 32.07 | 32.07 | 27.27 | 27.27 | 27.27 | 27.27 | 1010.79 |
| | **Total - KGBV** | 27.27 | 43.37 | 43.37 | 27.27 | 27.27 | 27.27 | 27.27 | 27.27 | 27.27 | 40.82 | 40.82 | 40.82 | 27.27 | 27.27 | 27.27 | 27.27 | 1074.29 |

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

## ಅನುಬಂಧ-2

## ಕೆ.ಜಿ.ಬಿ.ವಿ.ಗಳಲ್ಲಿ ಶೀರ್ಷಿಕೆವಾರು ಮಾಡಬೇಕಾದ ಖರ್ಚು-ವೆಚ್ಚಗಳ ಕುರಿತ ಮಾರ್ಗಸೂಚಿ

**ಅ) ಅನಾವರ್ತಕ ಅನುದಾನ**

1) ಕಟ್ಟಡ ನಿರ್ಮಾಣ:

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ನೂತನ 7 ಕೆ.ಜಿ.ಬಿ.ವಿ.ಗಳ ಕಟ್ಟಡ ನಿರ್ಮಾಣವನ್ನು ಆರಂಭಿಸಿ ಟೆಂಡರ್ ಕರೆಯಲು ಪೂರ್ವಭಾವಿಯಾಗಿ ರೂ. 2 ಲಕ್ಷ ಅನುದಾನ ಮಂಜೂರಾಗಿದೆ. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ Scheduled of Rates ಸರ್ಕಾರದಿಂದ ಅನುಮೋದನೆಯಾದ ನಂತರ ಕಟ್ಟಡ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದಿಂದ ಅನುದಾನ ಮಂಜೂರಾಗುತ್ತದೆ. ಅಲ್ಲಿಯವರೆಗೂ ರೂ. 2 ಲಕ್ಷ ಅನುದಾನ ವೆಚ್ಚ ಮಾಡದಿರಲು ತಿಳಿಸಿದೆ.

2) ವಿದ್ಯುಚ್ಛಕ್ತಿ ಮತ್ತು ನೀರಿನ ವೆಚ್ಚ:

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಿಗೆ ಪ್ರತಿ ಕೆ.ಜಿ.ಬಿ.ವಿ.ಗೆ ರೂ. 10,000 ದಂತೆ ಮಂಜೂರಾಗಿದ್ದು, ಈ ಅನುದಾನದಲ್ಲಿ ವಿದ್ಯುದೀಕರಣ ಮತ್ತು ನೀರಿನ ವ್ಯವಸ್ಥೆ ಕಲ್ಪಿಸುವುದು.

3) ಪೀಠೋಪಕರಣಗಳು ಮತ್ತು ಅಡುಗೆ ಸಾಮಾನುಗಳು:

1) ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗಳಿಗೆ ರೂ. 1.5 ಲಕ್ಷದಂತೆ ಹಾಗೂ 7 ನೂತನ ಕೆ.ಜಿ.ಬಿ.ವಿ.ಗಳಿಗೆ ಪ್ರತಿ ಕೆ.ಜಿ.ಬಿ.ವಿ.ಗೆ ರೂ 2.5 ಲಕ್ಷದಂತೆ ಅನುದಾನ ಮಂಜೂರಾಗಿದೆ.
2) ಈ ಅನುದಾನದಲ್ಲಿ ಮಕ್ಕಳು ಶಾಲೆಯಲ್ಲಿ ಕೂಡಲು ಮತ್ತು ವಸತಿ ನಿಲಯದಲ್ಲಿ ಮಲಗಲು ಮತ್ತು ಇತರೆ ಪೀಠೋಪಕರಣಗಳನ್ನು ಖರೀದಿಸಿ, ಬಳಸಬೇಕು.
3) ಒಂದು ಮಗು ಮಲಗುವ ಮಂಚದ ಮೇಲೆ ಮತ್ತೊಂದು ಮಂಚ ನಿರ್ಮಿಸಿ ಬಳಸುವುದರಿಂದ ಸ್ಥಳಾವಕಾಶದ ಬಳಕೆ ಗರಿಷ್ಠ ಪ್ರಮಾಣದಲ್ಲಿ ಇರುತ್ತದೆ. ಆದರೆ ಮಕ್ಕಳು ಬೀಳದಂತೆ ತಡೆಯಲು ಮೇಲಿನ ಮಂಚಕ್ಕೆ ಕನಿಷ್ಠ ಒಂದು ಅಡಿ-ಕಬ್ಬಿಣದ ರಕ್ಷಣಾ ಪಟ್ಟಿ ಇರುವಂತೆ ನಿರ್ಮಿಸಿ.
4) ಈ ಅನುದಾನದಲ್ಲಿ ವಸತಿ ನಿಲಯಕ್ಕೆ ಬೇಕಾದ ಪಾತ್ರೆ-ಪಗಡ ಮತ್ತಿತರ ಅಡುಗೆ ತಯಾರಿಕೆಗೆ ಬೇಕಾದ ಸಾಮಗ್ರಿಗಳನ್ನು ಖರೀದಿಸುವುದು.

4) ಕಲಿಕೆ-ಬೋಧನೆ ಸಾಮಗ್ರಿಗಳು ಮತ್ತು ಗ್ರಂಥಾಲಯದ ಪುಸ್ತಕಗಳು:

150 ಪ್ರವೇಶಾವಕಾಶ ಆಗಿರುವ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ರೂ. 1.75 ಲಕ್ಷ ಹಾಗೂ ನೂತನ 7 ಕೆ.ಜಿ.ಬಿ.ವಿ.ಗಳಿಗೆ ಪ್ರತಿ ಕೆ.ಜಿ.ಬಿ.ವಿ.ಗೆ ರೂ. 3.5 ಲಕ್ಷ ಅನುದಾನ ಮಂಜೂರಾಗಿದೆ. ಇದರಲ್ಲಿ 6, 7, 8 ನೇ ತರಗತಿಗಳ ಪಠ್ಯವಿಷಯಗಳಿಗೆ ಸರಿಹೊಂದುವ ವಸ್ತುಗಳನ್ನು ಖರೀದಿಸುವುದು. ಖರೀದಿಸಬಹುದಾದ ವಸ್ತುಗಳು ಮತ್ತು ಅದಕ್ಕೆ ನಿಗದಿಪಡಿಸಿದ ಅನುದಾನ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಖರೀದಿಸಬೇಕಾದ ವಸ್ತುಗಳು | 150 ಪ್ರವೇಶಾವಕಾಶ ಆಗಿರುವ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ಲಭ್ಯ ಇರುವ ರೂ.1.75 ಲಕ್ಷ ಅನುದಾನದಲ್ಲಿ ಖರೀದಿಸಲು ಮಾಡಲು ನಿಗದಿ ಮಾಡಿರುವ ಅನುದಾನ (ರೂ.ಗಳಲ್ಲಿ) | 7 ನೂತನ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ಲಭ್ಯ ಇರುವ ರೂ.3.50 ಲಕ್ಷ ಅನುದಾನದಲ್ಲಿ ಖರೀದಿಸಲು ಮಾಡಲು ನಿಗದಿ ಮಾಡಿರುವ ಅನುದಾನ | ಖರೀದಿ ಮಾಡಲು ಅನುಸರಿಸಬೇಕಾದ ಕ್ರಮಗಳು |
|---|---|---|---|---|
| 1 | ಪ್ರಯೋಗಾಲಯ ವಸ್ತುಗಳು | 25,000 | 50,000 | • ಅಗತ್ಯ ಉಪಕರಣಗಳು/ವಸ್ತುಗಳ ಪಟ್ಟಿಯನ್ನು ಕೆ.ಜಿ.ಬಿ.ವಿ.ಮುಖ್ಯ ಶಿಕ್ಷಕರು, ಕೆ.ಜಿ.ಬಿ.ವಿ.ವಿಜ್ಞಾನ ಶಿಕ್ಷಕರು, ತಾಲೂಕಿನ ಒಬ್ಬ ಉತ್ತಮ ಪ್ರೌಢಶಾಲಾ ಶಿಕ್ಷಕರು ಮತ್ತು ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕರನ್ನೊಳಗೊಂಡ ಸಮಿತಿಯು ತೀರ್ಮಾನಿಸುವುದು.<br>• ಜಿಲ್ಲೆ/ಹತ್ತಿರದ ನಗರದಲ್ಲಿನ ವಿಜ್ಞಾನ ಉಪಕರಗಳ ಮಳಿಗೆ/ಇತರೆ ಅಂಗಡಿಗಳಿಂದ ಖರೀದಿ ಮಾಡುವುದು.<br>• ಖರೀದಿಸಿದ ವಸ್ತುಗಳ ಗುಣಮಟ್ಟವನ್ನು ಸಮಿತಿ ಪರಿಶೀಲಿಸಿ, ಧೃಡೀಕರಿಸುವುದು. |
| 2 | ಕಲಿಕಾ ಬೋಧನೆ ಸಾಮಗ್ರಿಗಳು | 15,000 | 30,000 | |
| 3 | ಆಟೋಪಕರಣಗಳು | 15,000 | 30,000 | • ಅಗತ್ಯ ಉಪಕರಣಗಳು/ವಸ್ತುಗಳ ಪಟ್ಟಿಯನ್ನು ಕೆ.ಜಿ.ಬಿ.ವಿ.ಮುಖ್ಯ ಶಿಕ್ಷಕರು, ಕೆ.ಜಿ.ಬಿ.ವಿ.ದೈಹಿಕ ಶಿಕ್ಷಕರು, ತಾಲೂಕಿನ ಒಬ್ಬ ಉತ್ತಮ ಪ್ರೌಢಶಾಲಾ ದೈಹಿಕ ಶಿಕ್ಷಕರು ಮತ್ತು ಒಬ್ಬ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರನ್ನೊಳಗೊಂಡ ಸಮಿತಿಯು ತೀರ್ಮಾನಿಸುವುದು. ಪಟ್ಟಿಯಲ್ಲಿ ಕ್ರಿಕೆಟ್, ವಾಲಿಬಾಲ್ ಹಾಗೂ ಇತರೆ ಎಲ್ಲಾ ಆಟಗಳ ಆಟದ ಸಾಮಗ್ರಿಗಳಿರಲಿ; ಬರಿ ಹೆಣ್ಣುಮಕ್ಕಳ ಆಟದ ವಸ್ತುಗಳನ್ನು ಮಾತ್ರ ಖರೀದಿಸುವುದು ಬೇಡ.<br>• ಜಿಲ್ಲೆ/ಹತ್ತಿರದ ನಗರದಲ್ಲಿನ ಆಟದ ಉಪಕರಗಳ ಮಳಿಗೆ/ಇತರೆ ಅಂಗಡಿಗಳಿಂದ ಖರೀದಿ ಮಾಡುವುದು.<br>• ಖರೀದಿಸಿದ ವಸ್ತುಗಳ ಗುಣಮಟ್ಟವನ್ನು ಸಮಿತಿ ಪರಿಶೀಲಿಸಿ, ಧೃಡೀಕರಿಸುವುದು. |
| 4 | ಕಂಪ್ಯೂಟರ್/ಯು.ಪಿ.ಎಸ್. | 80,000 | 1,60,000 | • ಕಂಪ್ಯೂಟರ್/ಯುಪಿ.ಎಸ್. ನ ಸ್ಪೆಸಿಫಿಕೇಶನ್ ಅನ್ನು ಕೆ.ಜಿ.ಬಿ.ವಿ.ಮುಖ್ಯ ಶಿಕ್ಷಕರು, ಕೆ.ಜಿ.ಬಿ.ವಿ.ಕಂಪ್ಯೂಟರ್ ಶಿಕ್ಷಕರು, ಜಿಲ್ಲೆಯ ಸ.ಶಿ.ಅ.ದ ಕಂಪ್ಯೂಟರ್ ಪ್ರೋಗ್ರಾಮರ್ ಮತ್ತು ಮಾಹಿತಿ ಸಿಂಧು ಶಾಲೆಯ ಕಂಪ್ಯೂಟರ್ ಶಿಕ್ಷಕರನ್ನೊಳಗೊಂಡ ಸಮಿತಿಯು |

| | | | | |
|---|---|---|---|---|
| | | | | ತೀರ್ಮಾನಿಸುವುದು.<br>• ಜಿಲ್ಲೆ/ಹತ್ತಿರದ ನಗರದಲ್ಲಿನ ಕಂಪ್ಯೂಟರ್ ಅಂಗಡಿಗಳಿಂದ ಖರೀದಿ ಮಾಡುವುದು.<br>• ಖರೀದಿಸಿದ ವಸ್ತುಗಳ ಗುಣಮಟ್ಟವನ್ನು ಸಮಿತಿ ಪರಿಶೀಲಿಸಿ, ಧೃಡೀಕರಿಸುವುದು. |
| 5 | ಗ್ರಂಥಾಲಯ ಪುಸ್ತಕಗಳು | 15,000 | 30,000 | • ಕೆ.ಜಿ.ಬಿ.ವಿ.ಮುಖ್ಯ ಶಿಕ್ಷಕರು, ಕೆ.ಜಿ.ಬಿ.ವಿ.ಯ ಎಲ್ಲಾ ಶಿಕ್ಷಕರು, ಹತ್ತಿರದ ಪ್ರೌಢಶಾಲೆಯ ಇಬ್ಬರು ಶಿಕ್ಷಕರು, ಜಿಲ್ಲೆಯ/ತಾಲೂಕಿನ ಖ್ಯಾತ ಬರಹಗಾರರನ್ನೊಳಗೊಂಡ ಸಮಿತಿಯು ಪುಸ್ತಕಗಳ ಪಟ್ಟಿಯನ್ನು ತೀರ್ಮಾನಿಸುವುದು.<br>• ಜಿಲ್ಲೆ/ಹತ್ತಿರದ ನಗರದಲ್ಲಿನ ಪುಸ್ತಕ ಅಂಗಡಿಗಳು ಅಥವಾ ಖ್ಯಾತ ಪುಸ್ತಕ ಮಳಿಗೆಗಳಾದ ಸ್ವಪ್ನ ಬುಕ್ ಸ್ಟಾಲ್, ನವಕರ್ನಾಟಕ ಪಬ್ಲಿಕೇಶನ್, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್, ಇತ್ಯಾದಿಗಳಿಂದ ಖರೀದಿ ಮಾಡುವುದು.<br>• ಖರೀದಿಸಿದ ಪುಸ್ತಕಗಳ ಗುಣಮಟ್ಟವನ್ನು ಸಮಿತಿ ಪರಿಶೀಲಿಸಿ, ಧೃಡೀಕರಿಸುವುದು. |
| 6 | ವೃತ್ತಿ ಶಿಕ್ಷಣ ಸಾಮಗ್ರಿಗಳು | 25,000 | 50,000 | • ಕೆ.ಜಿ.ಬಿ.ವಿ.ಮುಖ್ಯ ಶಿಕ್ಷಕರು, ಕೆ.ಜಿ.ಬಿ.ವಿ.ಯ ವೃತ್ತಿ ಶಿಕ್ಷಕರು, ಕೆ.ಜಿ.ಬಿ.ವಿ.ಯ ಇತರೆ ಇಬ್ಬರು ಶಿಕ್ಷಕರು, ತಾಲೂಕು/ಜಿಲ್ಲೆಯ ಐ.ಟಿ.ಐ.ಕಾಲೇಜಿನ ಉಪನ್ಯಾಸಕರು, ಹತ್ತಿರದ ಪ್ರೌಢಶಾಲೆಯ ವೃತ್ತಿ ಶಿಕ್ಷಕರನ್ನೊಳಗೊಂಡ ಸಮಿತಿಯು ಸಾಮಗ್ರಿಗಳ ಪಟ್ಟಿಯನ್ನು ತೀರ್ಮಾನಿಸುವುದು. ಪಟ್ಟಿಯಲ್ಲಿ ಹೊಲಿಗೆ ಯಂತ್ರಗಳು ಮಾತ್ರ ಇರದೆ ಇತರೆ ವೃತ್ತಿಗಳಿಗೆ ಸಂಬಂಧಿಸಿದ ಸಾಮಗ್ರಿಗಳೂ (ಉದಾ: ವಿದ್ಯುತ್ ಉಪಕರಣಗಳ ರಿಪೇರಿ, ಟಿವಿ ರಿಪೇರಿ ಇತ್ಯಾದಿ) ಇರಲಿ. ಹೆಣ್ಣುಮಕ್ಕಳಿಗೆ ಬರೀ ಹೊಲಿಗೆ, ಕಸೂತಿ ಕಲಿಕೆಗೆ ಮಾತ್ರ ಸೀಮಿತಗೊಳಿಸುವುದು ಬೇಡ.<br>• ಜಿಲ್ಲೆ/ಹತ್ತಿರದ ನಗರದಲ್ಲಿನ ಅಂಗಡಿಗಳಿಂದ ಖರೀದಿ ಮಾಡುವುದು.<br>• ಖರೀದಿಸಿದ ವಸ್ತುಗಳ ಗುಣಮಟ್ಟವನ್ನು ಸಮಿತಿ ಪರಿಶೀಲಿಸಿ, ಧೃಡೀಕರಿಸುವುದು. |
| ಒಟ್ಟು | | 1,75,000 | 3,50,000 | |

**ಗಮನಿಸಿ:** ಖರೀದಿಸಿದ ವಸ್ತುಗಳನ್ನು ಕೆ.ಜಿ.ಬಿ.ವಿ. ಸ್ಟಾಕ್ ರಿಜಿಸ್ಟರ್‌ಗೆ ತೆಗೆದುಕೊಳ್ಳುವುದು ಮತ್ತು ಎಲ್ಲಾ ರಶೀದಿಗಳನ್ನು ಕಾಯ್ದಿರಿಸುವುದು. ಖರೀದಿ ಪ್ರಕ್ರಿಯೆ ಪಾರದರ್ಶಕವಾಗಿದ್ದು, ಸ.ಶಿ.ಅ.ದ ಖರೀದಿ ನಿಯಮಗಳನ್ನು ಅನುಸರಿಸುವುದು.

5) <u>ಹಾಸಿಗೆ-ಹೊದಿಕೆಗಳು:</u>

- ✓ 150 ಪ್ರವೇಶವಕಾಶ ಆಗಿರುವ ಕೆ.ಜಿ.ಬಿ.ವಿ.ಗಳಿಗೆ ಪ್ರತಿ ಕೆ.ಜಿ.ಬಿ.ವಿ.ಗೆ ರೂ. 37,500/- ಹಾಗೂ ನೂತನ 7 ಕೆ.ಜಿ.ಬಿ.ವಿ.ಗಳಿಗೆ ಪ್ರತಿ ಕೆ.ಜಿ.ಬಿ.ವಿ.ಗೆ ರೂ 75,000/- ರಂತೆ ಮಂಜೂರಾಗಿದೆ.
- ✓ ಹಾಸನ ಜಿಲ್ಲೆಯ ಹೊಳೆನರಸೀಪುರ ಹಾಗೂ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಕೆ.ಜಿ.ಬಿ.ವಿ.ಗಳಿಗೆ ತಲಾ ರೂ. 75,000/- ಮಂಜೂರಾಗಿದೆ.

ಈ ಮೊತ್ತವನ್ನು ಬಳಸಿಕೊಂಡು ಆಗಸ್ಟ್ 2011 ರೊಳಗೆ ಹಾಸಿಗೆ ಹೊದಿಕೆಗಳನ್ನು ಖರೀದಿ ಮಾಡುವುದು.

**<u>ಆವರ್ತಕ ಅನುದಾನ :</u>**

1) <u>ನಿರ್ವಹಣೆ ಅನುದಾನ :</u>

150 ಪ್ರವೇಶವಕಾಶ ಆಗಿರುವ ಕೆ.ಜಿ.ಬಿ.ವಿ.ಗಳಿಗೆ ವಾರ್ಷಿಕ ರೂ. 16.2 ಲಕ್ಷ ಅನುದಾನ ಹಾಗೂ ಇತರೆ ಎಲ್ಲಾ ಕೆ.ಜಿ.ಬಿ.ವಿ.ಗಳಿಗೆ ರೂ. 10.8 ಲಕ್ಷ ಅನುದಾನ ಮಂಜೂರಾಗಿದೆ. ಮಕ್ಕಳ ಸಂಖ್ಯೆಗೆ ಸಂವಾದಿಯಾಗಿ ಈ ಅನುದಾನವನ್ನು ವೆಚ್ಚ ಮಾಡಬಹುದು.

- 2010 – 11 ನೇ ಸಾಲಿನಿಂದ ಪ್ರತಿ ಮಗುವಿಗೆ ಮಾಸಿಕ ನಿರ್ವಹಣೆ ಅನುದಾನವನ್ನು ರೂ. 750 ರಿಂದ ರೂ. 900 ಕ್ಕೆ ಹೆಚ್ಚಿಸಲಾಗಿದೆ. ಇದರಲ್ಲಿ ಪ್ರತಿ ಮಗುವಿನ ತಿಂಗಳ ಆಹಾರ ಪೂರೈಕೆಗಾಗಿ ರೂ. 800 ವೆಚ್ಚ ಮಾಡಬಹುದು. ಈ ಕಛೇರಿಯ ದಿನಾಂಕ: 20.04.2010 ರ ಸುತ್ತೋಲೆಯಲ್ಲಿ ನೀಡಬೇಕಾದ ಆಹಾರದ ಸ್ವರೂಪ ಮತ್ತು ರೂಢಿಸಬೇಕಾದ ದಾಖಲೆಗಳ ಕುರಿತು ಹಾಗೂ ಹೊರಗುತ್ತಿಗೆ ಮೂಲಕ ಆಹಾರ ಪಡೆಯುವ ಕ್ರಮ ಕುರಿತಂತೆ ವಿವರಿಸಲಾಗಿದೆ. ಅದರಂತೆ ಕ್ರಮ ಕೈಗೊಳ್ಳುವುದು. ಗುಣಮಟ್ಟದ ಆಹಾರ ನೀಡಿಕೆಯನ್ನು ಶಾಲಾ ಮುಖ್ಯಸ್ಥರು, ವಾರ್ಡನ್ ಹಾಗೂ ಎಸ್.ಡಿ.ಎಂ.ಸಿ.ಯವರು ಖಚಿತ ಪಡಿಸಿಕೊಳ್ಳಬೇಕು. ಕೊರತೆ ಕಂಡುಬಂದಲ್ಲಿ ನಿಯಮದಂತೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಿದೆ.
- ಆಹಾರ ಪೂರೈಕೆಗಾಗಿ ಹೊರಗುತ್ತಿಗೆ ಏಜೆನ್ಸಿಯವರು 800 ಕ್ಕಿಂತ ಕಡಿಮೆ ದರ ವಿಧಿಸಿದಲ್ಲಿ ಉಳಿಯುವ ಮೊತ್ತದಲ್ಲಿ ವಿದ್ಯಾರ್ಥಿನಿಯರಿಗೆ ದಿನನಿತ್ಯ ಬಳಕೆ ಸಾಮಗ್ರಿಗಳಾದ ಪೌಡರ್, ಸೋಪು, ಎಣ್ಣೆ, ಬಾಚಣಿಗೆ, ಕನ್ನಡಿ, ಟೂತ್‌ಬ್ರಷ್, ಟೂತ್‌ಪೇಸ್ಟ್, ಚಪ್ಪಲಿಗಳು, ಟ್ರಂಕ್ ಇತ್ಯಾದಿಗಳನ್ನು ಖರೀದಿಸಿ, ಒದಗಿಸುವುದು.
- ಪ್ರತಿ ಮಗುವಿನ ಮಾಸಿಕ ನಿರ್ವಹಣೆ ಅನುದಾನದಲ್ಲಿ ಆಹಾರ ಪೂರೈಕೆ ಮತ್ತು ಇತರೆ ಅಗತ್ಯ ವೆಚ್ಚಗಳಿಗೆ ರೂ. 800 ವೆಚ್ಚ ಮಾಡಬಹುದಾಗಿದ್ದು, ಉಳಿದ ರೂ. 100 ರಲ್ಲಿ (ವಾರ್ಷಿಕ ರೂ. 1200) ವಿದ್ಯಾರ್ಥಿನಿಯರಿಗೆ ಅಗತ್ಯವಾದ ಸಮವಸ್ತ್ರ ಮತ್ತು ಇತರೆ ವಸ್ತ್ರಗಳನ್ನು ಖರೀದಿಸಲು ಬಳಸುವುದು.

2) <u>ವಿದ್ಯಾರ್ಥಿ ವೇತನ :</u>

ಪ್ರತಿ ವಿದ್ಯಾರ್ಥಿನಿಗೆ ರೂ 50 ರಂತೆ 150 ಪ್ರವೇಶವಕಾಶ ಆಗಿರುವ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 90,000/- ಹಾಗೂ ಇತರೆ ಎಲ್ಲಾ ಕೆ.ಜಿ.ಬಿ.ಗಳಿಗೆ ಪ್ರತಿ ಕೆ.ಜಿ.ಬಿ.ವಿ ಗೆ ವಾರ್ಷಿಕ ರೂ. 60,000/- ಅನುದಾನ ಲಭ್ಯವಿದೆ. ವಿದ್ಯಾರ್ಥಿವೇತನದ ಮೊತ್ತವನ್ನು ಕೆಳಕಂಡ ಚಟುವಟಿಕೆಗಳಿಗೆ ಬಳಕೆ ಮಾಡಬಹುದು.

1) ವಿದ್ಯಾರ್ಥಿನಿಯರು ವಿವಿಧ ಹಂತಗಳಲ್ಲಿನ ಕ್ರೀಡಾಕೂಟ/ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಲು ಬೇಕಾದ ಸೌಲಭ್ಯಗಳನ್ನು ಒದಗಿಸುವುದು.
2) ವಿದ್ಯಾರ್ಥಿನಿಯರಿಗೆ ಹೊರಸಂಚಾರ/ಪ್ರವಾಸ ಕಾರ್ಯಗಳನ್ನು ಏರ್ಪಡಿಸುವುದು.
3) ವಿದ್ಯಾರ್ಥಿನಿಯರು ಸ್ವಂತ ಊರಿಗೆ ಹೋಗಲೇಬೇಕಾದ ಸಂದರ್ಭಗಳಲ್ಲಿ ಪ್ರಯಾಣ ಭತ್ಯೆಗಾಗಿ ಬಳಸಬಹುದು.
4) ಹೆಣ್ಣು ಮಕ್ಕಳ ದೈಹಿಕ, ಶೈಕ್ಷಣಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಯಾವುದೇ ಅವಿಷ್ಕೃತ ಚಟುವಟಿಕೆಗಳಿಗೆ ಬಳಕೆ ಮಾಡಬಹುದಾಗಿದ್ದು, ಈ ಯೋಜನೆಯಲ್ಲಿ ಇಂತಹ ಚಟುವಟಿಕೆಗೆ ಬೇರೆಡೆ ಅನುದಾನವಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳುವುದು.

3) <u>ಹೆಚ್ಚುವರಿ ಕಲಿಕಾ-ಬೋಧನಾ ಸಾಮಗ್ರಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳು:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗಳಿಗೆ ರೂ. 90,000 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ರೂ 60,000 ದಂತೆ ಅನುದಾನ ಮಂಜೂರಾಗಿದೆ.

ಈ ಅನುದಾನ ಬಳಸಿಕೊಂಡು ತೀರಿ ಹೋಗುವ (Exhaustible) ವಸ್ತುಗಳಾದ – ಪ್ರಯೋಗಾಲಯದ ರಾಸಾಯನಿಕಗಳು ; ಗಾಜಿನ ಉಪಕರಣಗಳು, ಗಣಕಯಂತ್ರದ ಕೊಠಡಿಯಲ್ಲಿ ಬಳಕೆಯಾಗುವ ಸಾದಿಲ್ವಾರು ವಸ್ತುಗಳ ಖರೀದಿ ; ಬೋಧನೋಪಕರಣಗಳು ; ಗ್ರಂಥಾಲಯ ಪುಸ್ತಕಗಳು ; ನಿಯತಕಾಲಿಕೆಗಳು (Kannada/English/Urdu) ದಿನಪತ್ರಿಕೆಗಳು ; ಇತ್ಯಾದಿ ; ಶೈಕ್ಷಣಿಕವಾಗಿ ಶಾಲೆಗೆ ಉಪಯೋಗವಾಗುವ ವಸ್ತುಗಳನ್ನು ಖರೀದಿಸುವುದು. ಈ ಅನುದಾನವನ್ನು ಬಳಸಿಕೊಂಡು ಶಾಲೆಯಲ್ಲಿ ಬೋಧನಾ-ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ಬೇಕಾದ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಬಳಸಬಹುದಾಗಿದೆ. ಪ್ರತಿ ಮಗುವಿನ ಸಾಮರ್ಥ್ಯದ ಮಟ್ಟವನ್ನು ಹಾಗೂ ಅದು ತಲುಪಬೇಕಾದ ಹಂತವನ್ನು ಗಮನದಲ್ಲಿರಿಸಿಕೊಂಡು ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸುವುದು. ಸಾಧ್ಯವಿದ್ದಲ್ಲಿ, ವಿದ್ಯಾರ್ಥಿನಿಯರೇ ಸಿದ್ಧಪಡಿಸಿ, ಬಳಸುವಂತೆ ಪ್ರೇರೇಪಿಸುವುದು.

4) <u>ಪರೀಕ್ಷಾ ಶುಲ್ಕ:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗಳಿಗೆ ವಾರ್ಷಿಕ ರೂ. 3,000 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 2,000 ದಂತೆ ಅನುದಾನ ಮಂಜೂರಾಗಿದೆ.

1) ಈ ಅನುದಾನವನ್ನು ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕ ಪಾವತಿಗೆಂದು ಮೀಸಲಿಡಲಾಗಿದೆ. ಆದರೆ ಯಾವುದೇ ಪರೀಕ್ಷಾ ಶುಲ್ಕವನ್ನು ಸರ್ಕಾರಕ್ಕೆ ಪಾವತಿ ಮಾಡುವ ಅವಶ್ಯಕತೆ ಇಲ್ಲದ ಕಾರಣ ಈ ಅನುದಾನವನ್ನು ವಿದ್ಯಾರ್ಥಿನಿಯರ ಮೌಲ್ಯಮಾಪನಕ್ಕಾಗಿ ಅವಶ್ಯಕ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲು/ಮುದ್ರಿಸಲು ಬಳಕೆ ಮಾಡಬಹುದಾಗಿದೆ.

2) 6, 7 ಹಾಗೂ 8 ನೇ ತರಗತಿಗಳಿಗೆ ಪ್ರಗತಿ ಪತ್ರಗಳನ್ನು ಇಲಾಖೆಯಿಂದ ಪಡೆಯಬಹುದಾಗಿದ್ದು, ಕಲಿಕೆಯಲ್ಲಿ ಹಿಂದುಳಿದ ಹೆಣ್ಣುಮಕ್ಕಳನ್ನು ದೀರ್ಘ ಕಾಲದವರೆಗೆ 6 ನೇ ತರಗತಿಗೂ ಅಳವಡಿಸಲು ಸಾಧ್ಯವಾಗದ ಸಂದರ್ಭದಲ್ಲಿ, ಇವರಿಗೆ ನಡೆಸಲಾಗುವ ದೀರ್ಘಾವಧಿ ಪರಿಹಾರ ಬೋಧನೆಗೆ ಪ್ರತಿ ಶಾಲೆಯ ವಾತಾವರಣಕ್ಕೆ ಅನುಗುಣವಾಗಿ ಪ್ರಗತಿ ಪತ್ರಗಳನ್ನು ಸಿದ್ಧಪಡಿಸಲು ಸದರಿ ಅನುದಾನವನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ. ಈ ಪ್ರಗತಿ ಪತ್ರಗಳು ಸಾಮರ್ಥ್ಯಾಧಾರಿತವಾಗಿರತಕ್ಕದ್ದು.

3) ವಿದ್ಯಾರ್ಥಿಯನಿಯರಿಗೆ ಈ ಅನುದಾನದಡಿಯಲ್ಲಿ ಉತ್ತರ ಪತ್ರಿಕೆಗಳನ್ನು ಖರೀದಿಸಿ, ನೀಡುವುದು.

5) <u>ವೇತನ:</u>

1. ಎಲ್ಲಾ ಕೆ.ಜಿ.ಬಿ.ವಿ.ಗಳಿಗೆ ರೂ.12.00 ಲಕ್ಷ ಅನುದಾನ ಮಂಜೂರಾಗಿದ್ದು, ಈ ಅನುದಾನದಲ್ಲಿ ವರ್ಗಾವಣೆ/ಸ್ಥಳ ನಿಯುಕ್ತಿಗೊಂಡ ಮುಖ್ಯ ಶಿಕ್ಷಕರ ಮತ್ತು ಶಿಕ್ಷಕರ ವೇತನ ಪಾವತಿಗಾಗಿ ಹಾಗೂ ಅರೆಕಾಲಿಕ ಸಿಬ್ಬಂದಿಯ ವೇತನ ಪಾವತಿಗಾಗಿ ಈ ಅನುದಾನವನ್ನು ಉಪಯೋಗಿಸುವುದು. ಮಹಿಳಾ ಸಮಖ್ಯಾ ನಿರ್ವಹಣೆಯ ಕೆ.ಜಿ.ಬಿ.ವಿ.ಗಳಲ್ಲಿ ಕಾರ್ಯನಿರ್ವಹಿಸುವ ಪೂರ್ಣಕಾಲಿಕ ಮುಖ್ಯ ಶಿಕ್ಷಕರ ಮತ್ತು ಶಿಕ್ಷಕರ ವೇತನ ಪಾವತಿಗಾಗಿ ಸರ್ವ ಶಿಕ್ಷಣ ಅಭಿಯಾನದಡಿ ಲಭ್ಯ ಇರುವ ಅನುದಾನದಲ್ಲಿ ಮುಂಗಡವಾಗಿ ಭರಿಸಲು ಸೂಚಿಸಿದೆ.
2. ಕೆ.ಜಿ.ಬಿ.ವಿ.ಯಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಕೆ.ಜಿ.ಬಿ.ವಿ.ಯಿಂದ ಆರು ತಿಂಗಳ ವೇತನ ಅನುದಾನವನ್ನು ಬಿ.ಇ.ಓ./ಬಿ.ಆರ್.ಸಿ.ಕಛೇರಿಗೆ ಮುಂಗಡವಾಗಿ ಪಡೆದು, ಅಲ್ಲಿಂದ ವೇತನ ನೀಡುವುದು. ಶಿಕ್ಷಕರ ಸೇವಾ ಪುಸ್ತಕಗಳನ್ನು ಬಿ.ಇ.ಓ./ಬಿ.ಆರ್.ಸಿ.ಕಛೇರಿಯಲ್ಲಿ ನಿರ್ವಹಿಸುವುದು.

3. ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 4.74 ಲಕ್ಷ ಅನುದಾನ ಮಂಜೂರಾಗಿದೆ. ಈ ಅನುದಾನದಲ್ಲಿ ಮೂವರು ಹೆಚ್ಚುವರಿ ಅರೆಕಾಲಿಕ ಮಹಿಳಾ ಶಿಕ್ಷಕರನ್ನು ಆಯ್ಕೆಗೊಂಡ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳುವುದು. ಇದರಲ್ಲಿ ಒಬ್ಬ ಶಿಕ್ಷಕರಿಗೆ ಸಹಾಯಕ ವಾರ್ಡನ್ ಆಗಿ ನೇಮಿಸುವುದು. ಇವರು ವಾರ್ಡನ್‌ರವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವುದು. ಈ ಅರೆಕಾಲಿಕ ಶಿಕ್ಷಕರಿಗೆ ಮಾಸಿಕ ರೂ. 5000/- ಗೌರವಧನವನ್ನು ನೀಡುವುದು. ಏಜೆನ್ಸಿಯು ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ./ಏ.ಆ/2011-12 ದಿನಾಂಕ: 04-05-2011 ಯಲ್ಲಿ ತಿಳಿಸಿರುವ ಸೌಲಭ್ಯಗಳನ್ನು ಒದಗಿಸುವ ಷರತ್ತಿಗೆ ಒಪ್ಪಬೇಕು.

6) <u>ವೃತ್ತಿ ಶಿಕ್ಷಣ ಮತ್ತು ನಿರ್ದಿಷ್ಟ ಕೌಶಲ ಬೆಳವಣಿಗೆ:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 75,000 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 50,000 ದಂತೆ ಅನುದಾನ ಮಂಜೂರಾಗಿದೆ. ಈ ಅನುದಾನವನ್ನು ಈ ಕೆಳಗಿನಂತೆ ವೆಚ್ಚ ಮಾಡುವುದು.

1. ಪ್ರತಿ ಕೆ.ಜಿ.ಬಿ.ವಿ ಯಲ್ಲಿ ಕನಿಷ್ಠ 3 ವೃತ್ತಿ ಕೌಶಲಗಳ ಬೆಳವಣಿಗೆಗೆ ಅವಕಾಶ ಕಲ್ಪಿಸುವುದು. ಹೊಲಿಗೆ, ಕಸೂತಿ, ಬೊಂಬೆ ತಯಾರಿಕೆ, ಮೇಣದ ಬತ್ತಿ ತಯಾರಿಕೆ, ವಿದ್ಯುತ್ ಉಪಕರಣಗಳ ದುರಸ್ತಿ, ಮೊಬೈಲ್ ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳ ದುರಸ್ತಿ, ಕಂಪ್ಯೂಟರ್ ಹಾರ್ಡ್‌ವೇರ್ ತರಬೇತಿ, ಮುದ್ರಣ ತರಬೇತಿ ಹಾಗೂ ಇತರೆ ಸೂಕ್ತ ವೃತ್ತಿ ಕೌಶಲಗಳ ಕಲಿಕೆಗೆ ಅವಕಾಶ ಕಲ್ಪಿಸುವುದು. ವೃತ್ತಿ ಕೌಶಲ ತರಬೇತಿ ಎಂದರೆ ಹೊಲಿಗೆ ಕಸೂತಿಗೆ ಮಾತ್ರ ಸೀಮಿತವಾಗದೇ ಇತರೆ ಕೌಶಲಗಳ ಬೆಳವಣಿಗೆಗೂ ಅವಕಾಶ ಕಲ್ಪಿಸುವುದು.
2. ಕಾರ್ಯ ಪ್ರಪಂಚದ ಅರಿವನ್ನು ಮಗುವಿಗೆ ಮಾಡಿಕೊಡುವುದು ಈ ಚಟುವಟಿಕೆಯ ಮುಖ್ಯ ಉದ್ದೇಶ. ಕೆ.ಜಿ.ಬಿ.ವಿ ಶಾಲೆಗಳ ಶಿಕ್ಷಕರ ಕೈಪಿಡಿಯ ಅಧ್ಯಾಯ-7 ರ 'ಬೋಧಿಸಬೇಕಾದ ವಿಷಯಗಳು' ಎಂಬ ಭಾಗದಲ್ಲಿ (ಪುಟ ಸಂಖ್ಯೆ: 75) ಅಭ್ಯಾಸ ಮಾಡಿಸಬಹುದಾದ ಚಟುವಟಿಕೆ ಪಟ್ಟಿ ಮಾಡಿದೆ. ಕನಿಷ್ಠ ಮೂರು ವಿಷಯಗಳಲ್ಲಿ ಪ್ರತಿ ವರ್ಷ ಪ್ರತಿ ಮಗು ನೈಪುಣ್ಯತೆ ಸಾಧಿಸಲು ಅನುಭವ ಕೊಡಿ. ಸಾಧ್ಯವಾದರೆ ಹೆಚ್ಚಿಗೆ ಕೂಡ ಮಾಡಿಸಬಹುದು. ಆದರೆ ಕೆಲವು ವಸ್ತುಗಳ ತಯಾರಿಕೆಯನ್ನು ವ್ಯಾಪಕವಾಗಿ ಮಾಡಿಸಬಹುದು. ಉದಾಹರಣೆಗೆ : ಮಾರ್ಜಕಗಳ ತಯಾರಿಕೆ ; ಆಹಾರ ವಸ್ತು ತಯಾರಿಕೆ ಇತ್ಯಾದಿ. ಹಾಗಾಗಿ ಉತ್ತಮ ಪರಿಶ್ರಮವಿರುವ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ವಿವಿಧ ಅನುಭವ ನೀಡುವುದು ಯುಕ್ತ.
3. ಹೆಣ್ಣುಮಕ್ಕಳಿಗೆ ವಿವಿಧ ಕೌಶಲಗಳ ತರಬೇತಿಯನ್ನು ನೀಡುವಾಗ ಒಬ್ಬರಿಗಿಂತ ಹೆಚ್ಚಿನ ವೃತ್ತಿ ತರಬೇತಿದಾರರು ವಿವಿಧ ಶಿಕ್ಷಣಕ್ಕೆ ಅವಶ್ಯಕವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಎನ್.ಪಿ.ಇ.ಜಿ.ಇ.ಎಲ್ ಕಾರ್ಯಕ್ರಮದಲ್ಲಿ ಸೂಚಿಸಿರುವಂತೆಯೇ 3 ತಿಂಗಳಿಗೆ ಮಾತ್ರ ಇಂತಹ ಸ್ವಯಂ ಸೇವಕರನ್ನು/ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು. ಇವರಿಗೆ ಮಾಹೆಯಾನ ರೂ 1,500/- ಸಂಭಾವನೆಯನ್ನು ನೀಡಬಹುದಾಗಿದೆ. ಸಂಪನ್ಮೂಲ ವ್ಯಕ್ತಿಗಳು ಜಿಲ್ಲಾ ಕೇಂದ್ರ ಅಥವಾ ತಾಲ್ಲೂಕು ಕೇಂದ್ರಗಳಿಂದ ಬಂದಲ್ಲಿ ಅವರಿಗೆ ನೈಜ ಪ್ರಯಾಣ ದರವನ್ನು ಪಾವತಿಸುವುದು. ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರತಿ ಭೇಟಿಗೆ ರೂ. 25 ಅಥವಾ ವಾಸ್ತವ ವೆಚ್ಚವನ್ನು ಸ್ಥಳೀಯ ಭತ್ಯೆಯನ್ನು ಪಾವತಿಸುವುದು.
4. ಇಂತಹ ವಿವಿಧ ವೃತ್ತಿ ಶಿಕ್ಷಣಕ್ಕೆ ಅವಶ್ಯಕವಾದ ಕಚ್ಚಾ ಸಾಮಗ್ರಿಗಳ ಖರೀದಿಗೆ ಅನುದಾನ ಬಳಕೆ ಮಾಡಬಹುದು.
5. ಕಂಪ್ಯೂಟರ್‌ಗೆ ಸಂಬಂಧಿಸಿದ ಸ್ಟೇಷನರಿಗಳನ್ನು ಖರೀದಿಸುವುದು ಹಾಗೂ ಕಂಪ್ಯೂಟರ್ ಮತ್ತು ಯು.ಪಿ.ಎಸ್ ಗಳ ನಿರ್ವಹಣಾ ಕಾರ್ಯಕ್ಕೆ ಬಳಕೆ ಮಾಡುವುದು.

6. ಈ ಚಟುವಟಿಕೆಗಳಿಗೆ ಬೇಕಾದ ಸಾಮಗ್ರಿಗಳ ಖರೀದಿಗೆ ಹಣ ಬಳಸಬಹುದು. ಕಾರ್ಯ ಶಿಕ್ಷಣ ಬೋಧನೆಗೆ ಬೇಕಾದ ಬಟ್ಟೆ, ರಾಸಾಯನಿಕಗಳು ; ಆಹಾರ ವಸ್ತು ತಯಾರಿಕೆಗೆ ಬೇಕಾದ ಸಾಮಾಗ್ರಿ ; ಮತ್ತು ಹಣ ಉಳಿತಾಯವಾದರೆ ಮೇಣದ ಬತ್ತಿ ತಯಾರಿಕೆಯ ಅಚ್ಚುಗಳಂತಹ ಸ್ಥಾಯಿ ವಸ್ತುಗಳನ್ನು ಖರೀದಿಸಬಹುದು.

7) <u>ವಿದ್ಯುತ್ ಮತ್ತು ನೀರಿನ ಶುಲ್ಕ :</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 90,000 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 60,000 ದಂತೆ ಅನುದಾನ ಮಂಜೂರಾಗಿದೆ. ಈ ಅನುದಾನವನ್ನು ಈ ಕೆಳಗಿನಂತೆ ವೆಚ್ಚ ಮಾಡುವುದು.

1. ಈ ಅನುದಾನವನ್ನು ವಿದ್ಯುತ್/ನೀರಿನ ಬಿಲ್ಲಿನ ಪಾವತಿಗಾಗಿ ಬಳಕೆ ಮಾಡುವುದು.
2. ಇದನ್ನು ವಿದ್ಯಾರ್ಥಿನಿಯರಿಗೆ ಬಿಸಿ ನೀರನ್ನು ಒದಗಿಸಲು ಅವಶ್ಯವಾದ ಸೌಲಭ್ಯಗಳಾದ ಸೋಲಾರ್, ಗುಜರಾತ್ ಬಾಯ್ಲರ್ ಅಥವಾ ಗ್ಯಾಸ್ ಗೀಸರ್‌ಗಳ ಸ್ಥಾಪನೆಗೆ ಬಳಕೆ ಮಾಡಬಹುದಾಗಿದೆ.
3. ಶಾಲೆಗೆ ನೀರಿನ ಸರಬರಾಜು ಮಾಡಿಕೊಳ್ಳುತ್ತಿದ್ದಲ್ಲಿ, ಇದರ ಪಾವತಿಗಾಗಿ ಅನುದಾನ ಬಳಕೆ ಮಾಡಬಹುದಾಗಿದೆ.
4. ಬಾಲಕಿಯರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಫಿಲ್ಟರ್‌ಗಳನ್ನು ಖರೀದಿಸಲು ವೆಚ್ಚಮಾಡಬಹುದಾಗಿದೆ.

8) <u>ವೈದ್ಯಕೀಯ ಶುಶ್ರೂಷೆ/ಸಾದಿಲ್ವಾರು:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 1,12,500 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 75,000 ದಂತೆ ಅನುದಾನ ಮಂಜೂರಾಗಿದೆ. ಈ ಅನುದಾನವನ್ನು ಈ ಕೆಳಗಿನಂತೆ ವೆಚ್ಚ ಮಾಡುವುದು.

1. ಪ್ರತಿ ಕೆ.ಜಿ.ಬಿ.ವಿ.ಯ ವಿದ್ಯಾರ್ಥಿನಿಯರ
   - ರಕ್ತದ ಗುಂಪಿನ ಪರೀಕ್ಷೆ
   - ಹಿಮೋಗ್ಲೋಬಿನ್ ಪರೀಕ್ಷೆ
   - ಸಾಮಾನ್ಯ ಆರೋಗ್ಯ ಪರೀಕ್ಷೆ
   - ಕಣ್ಣಿನ ಪರೀಕ್ಷೆ
   - ದಂತ ಪರೀಕ್ಷೆಗಳನ್ನು ಕೈಗೊಳ್ಳಲು ಸೂಚಿಸಿದೆ.

2. ವೈದ್ಯಕೀಯ ಪರೀಕ್ಷೆಗಾಗಿ ಹಾಗೂ ವೈದ್ಯರ ಸಲಹೆ/ಚಿಕಿತ್ಸೆಗಾಗಿ ಬ್ಲಾಕ್/ಜಿಲ್ಲೆಯ ಡೈಗ್ನಾಸ್ಟಿಕ್ ಲ್ಯಾಬ್‌ನ (ರಕ್ತ, ಮೂತ್ರ ಇತ್ಯಾದಿಗಳ ಪರೀಕ್ಷೆ ಮಾಡುವ ಪ್ರಯೋಗಾಲಯ) ತಜ್ಞರು /ತಜ್ಞ ವೈದ್ಯರು ಕೆ.ಜಿ.ಬಿ.ವಿ.ಗೆ ಕನಿಷ್ಠ 3 ತಿಂಗಳಿಗೊಮ್ಮೆ ಬಂದು ಸ್ಥಳದಲ್ಲಿಯೇ ಪರೀಕ್ಷೆ ನಡೆಸಿ, ವರದಿ ನೀಡಲು ನಿಯಮಿತ ಶುಲ್ಕ (ಪ್ರತಿ ವಿದ್ಯಾರ್ಥಿನಿಗೆ ಇಷ್ಟು ಎಂದು) ಪಾವತಿಸಲು ಒಡಂಬಡಿಕೆ ಮಾಡಿಕೊಳ್ಳಬಹುದು. ವರ್ಷದಲ್ಲಿ 3 ಬಾರಿ (ಜುಲೈ' 2011, ನವೆಂಬರ್' 2011, ಫೆಬ್ರವರಿ' 2011) ಈ ರೀತಿಯ ವೈದ್ಯಕೀಯ ಪರೀಕ್ಷೆಯನ್ನು ನಡೆಸಿ, ವಿದ್ಯಾರ್ಥಿನಿಯರ ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಗುರುತಿಸಿ, ಅದಕ್ಕೆ ಅಗತ್ಯ ಚಿಕಿತ್ಸೆಯನ್ನು ಮಾಡಿಸಬೇಕು.

4. ಹಿಮೋಗ್ಲೋಬಿನ್ ಕೊರತೆ ಇರುವ ಬಾಲಕಿಯರಿಗೆ ಅಗತ್ಯ ಔಷಧಿಗಳು ಹಾಗೂ ಇತರೆ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ಚಿಕಿತ್ಸೆ/ಔಷಧಿಯನ್ನು ಒದಗಿಸುವುದು

5. ಎರಡನೆ ತ್ರೈಮಾಸಿಕ ಅವಧಿಯ ವೈದ್ಯಕೀಯ ಪರೀಕ್ಷೆಯಲ್ಲಿ ಆರೋಗ್ಯ ಸಮಸ್ಯೆ ಇರುವ ಬಾಲಕಿಯರ ಸಮಸ್ಯೆಯು ಎಷ್ಟು ಪ್ರಮಾಣದಲ್ಲಿ ಪರಿಹಾರವಾಗಿದೆ ಎಂಬುದನ್ನು ಗಮನಿಸಿ, ತಜ್ಞ ವೈದ್ಯರ ಸಲಹೆಯ ಮೇರೆಗೆ ಚಿಕಿತ್ಸೆಯನ್ನು ಮುಂದುವರೆಸಬಹುದು.

6. ವಿದ್ಯಾರ್ಥಿನಿಯರ ವೈದ್ಯಕೀಯ ಪರೀಕ್ಷೆಯನ್ನು ಕೈಗೊಂಡು, ಈ ಕೆಳಗಿನಂತೆ ವರದಿಯನ್ನು ಆಯಾ ತ್ರೈಮಾಸಿಕ ಅಂತ್ಯದಲ್ಲಿ (ಜುಲೈ' 2011, ನವೆಂಬರ್' 2011, ಫೆಬ್ರವರಿ' 2011) ಈ ಕೆಳಗಿನಂತೆ ವರದಿಯನ್ನು ಸಲ್ಲಿಸುವುದು.

| ಕ್ರ. ಸಂ | ವೈದ್ಯಕೀಯ ಪರೀಕ್ಷೆಯ ವಿವರ | ಸಲ್ಲಿಸಬೇಕಾದ ವರದಿಗಳು |
|---|---|---|
| 1 | ರಕ್ತದ ಗುಂಪಿನಲ್ಲಿ ಪರೀಕ್ಷೆ | ವಿವಿಧ ರಕ್ತದ ಗುಂಪಿನಲ್ಲಿ ಇರುವ ವಿದ್ಯಾರ್ಥಿನಿಯರ ಸಂಖ್ಯೆ |
| 2 | ಹಿಮೋಗ್ಲೋಬಿನ್ ಪರೀಕ್ಷೆ | ಹಿಮೋಗ್ಲೋಬಿನ್ ಪ್ರಮಾಣ 8 ರೊಳಗೆ, 8 ರಿಂದ 10, 10 ರಿಂದ 12, 12 ರಿಂದ 14, 14 ಕ್ಕಿಂತ ಹೆಚ್ಚು ಇರುವ ವಿದ್ಯಾರ್ಥಿನಿಯರ ಸಂಖ್ಯೆ |
| 3 | ಸಾಮಾನ್ಯ ಆರೋಗ್ಯ ಪರೀಕ್ಷೆ | ವಿವಿಧ ರೀತಿಯ ದೈಹಿಕ ಸಮಸ್ಯೆ/ಖಾಯಿಲೆವಾರು ವಿದ್ಯಾರ್ಥಿನಿಯರ ಸಂಖ್ಯೆ |
| 4 | ಕಣ್ಣು/ಕಿವಿ/ಮೂಗು/ಗಂಟಲು ಪರೀಕ್ಷೆ | ಕಣ್ಣು.ಕಿವಿ/ಮೂಗು/ಗಂಟಲು ಸಮಸ್ಯೆ ಇರುವ ವಿದ್ಯಾರ್ಥಿನಿಯರ ಸಂಖ್ಯೆ ಹಾಗೂ ಕನ್ನಡಕಗಳ ಅಗತ್ಯ ಇರುವ ವಿದ್ಯಾರ್ಥಿನಿಯರ ಸಂಖ್ಯೆ |
| 5 | ದಂತ ಪರೀಕ್ಷೆ | ದಂತ ಸಮಸ್ಯೆ ಇರುವ ವಿದ್ಯಾರ್ಥಿನಿಯರ ಸಂಖ್ಯೆ |
| 6 | ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳು | ಸಮಸ್ಯೆ ಇರುವ ವಿದ್ಯಾರ್ಥಿನಿಯರ ಸಂಖ್ಯೆ |

7. ವಿದ್ಯಾರ್ಥಿನಿಯರ ವೈದ್ಯಕೀಯ ಪರೀಕ್ಷೆಗಾಗಿ ಪತ್ಯೇಕ ಕಡತ ನಿರ್ವಹಿಸಿ ಪ್ರತಿ ಮಗುವಿನ ಆರೋಗ್ಯ ಸ್ಥಿತಿಯ ಬಗ್ಗೆ ದಾಖಲೆ ಇಡಬೇಕು. ತೂಕ, ಎತ್ತರಗಳ ಅಳತೆಗಳನ್ನು ನಿಯಮಿತವಾಗಿ ದಾಖಲಿಸಬೇಕು.
8. ಇಲಾಖೆಯಿಂದ ಹೆಲ್ತ್ ಕಾರ್ಡ್‌ಗಳನ್ನು ಪಡೆದು ಪ್ರತಿ ಮಗುವಿನ ಆರೋಗ್ಯ ಸ್ಥಿತಿಯನ್ನು ದಾಖಲೆ ಮಾಡುವುದು.
9. ಆರೋಗ್ಯಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ವಾರ್ಡನ್ ನಿರ್ವಹಿಸಬೇಕು ಹಾಗೂ ಮುಖ್ಯ ಶಿಕ್ಷಕರು ಇವುಗಳನ್ನು ಮೇಲಿಂದ ಮೇಲೆ ಪರಿಶೀಲಿಸುವುದು.
10. ವಿದ್ಯಾರ್ಥಿನಿಯರಿಗೆ ಅವಶ್ಯಕವಾದ ಔಷಧಿ/ಮಾತ್ರೆಗಳನ್ನು ಖರೀದಿಸಬಹುದಾಗಿದೆ. ಮಕ್ಕಳಿಗೆ ಗುಳಿಗೆಗಳನ್ನು ನೀಡಿದ ಬಗ್ಗೆ ದಾಖಲೆಗಳನ್ನು ನಿರ್ವಹಿಸುವುದು.
11. ನಿಯಮಿತವಾಗಿ ಜಂತು ಹುಳುವಿನ ಔಷಧಿ ಎಲ್ಲರಿಗೂ ಕಡ್ಡಾಯವಾಗಿ ನೀಡುವುದು.
12. ಇಲಾಖೆಯಿಂದ ಮಧ್ಯಾಹ್ನ ಉಪಹಾರ ಯೋಜನೆಯಡಿ ನೀಡಲಾಗುವ ವಿಟಮಿನ್ ಮಾತ್ರೆಗಳನ್ನು ಈ ಮಕ್ಕಳಿಗೂ ಪಡೆದು ವಿತರಿಸುವುದು.
13. ಹೆಣ್ಣುಮಕ್ಕಳಿಗೆ ಪ್ರತಿ ತಿಂಗಳಿನ ಋತುಸ್ರಾವದ ಸಂದರ್ಭದಲ್ಲಿ ಆರೋಗ್ಯವನ್ನು ಕಾಪಾಡಲು ಅಗತ್ಯ ನ್ಯಾಪ್‌ಕಿನ್‌ಗಳನ್ನು ಖರೀದಿ ಮಾಡಿ, ಒದಗಿಸುವುದು.
14. ಯಾವುದೇ ಹೆಣ್ಣು ಮಗು ಗಂಭೀರವಾದ ಕಾಯಿಲೆಯಿಂದ ನರಳುತ್ತಿದ್ದರೆ, ಇಂತಹ ಮಗುವಿಗೆ ವಿಶೇಷ ಸೌಲಭ್ಯ ಒದಗಿಸಲು/ಆಸ್ಪತ್ರೆಗೆ ಸೇರಿಸಿ ಖರ್ಚನ್ನು ಭರಿಸಲು ಅನುದಾನ ಬಳಕೆ ಮಾಡಬಹುದು.
15. ವೈಯುಕ್ತಿಕ ಸ್ವಚ್ಛತೆ, ಲೈಂಗಿಕ ಕಾಯಿಲೆಗಳು, ಹದಿಹರೆಯದಲ್ಲಿನ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳು, ಸಾಂಕ್ರಾಮಿಕ ರೋಗಗಳು, ಇತ್ಯಾದಿಗಳನ್ನು ಆಧರಿಸಿ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿಗಳನ್ನು ಅಥವಾ ಶಿಬಿರಗಳನ್ನು ಏರ್ಪಡಿಸಲು ಈ ಅನುದಾನವನ್ನು ಬಳಕೆ ಮಾಡಬೇಕು.

16. ಅವಶ್ಯ ಪ್ರಸಂಗಗಳಲ್ಲಿ ವಾರಕ್ಕೊಮ್ಮೆ ಖಾಸಗಿ ವೈದ್ಯರು ಶಾಲೆಗೆ ಭೇಟಿ ನೀಡಲು ವ್ಯವಸ್ಥೆ ಮಾಡಬಹುದಾಗಿದೆ. ಪ್ರತಿ ಭೇಟಿಗೆ ರೂ 500/- ಮೀರದಂತೆ ಸಂಭಾವನೆಯನ್ನು ನಿಗದಿಗೊಳಿಸಬಹುದಾಗಿದೆ. ಈ ಭೇಟಿಯಲ್ಲಿ ಕೇವಲ ತೂಕ ಮತ್ತು ಎತ್ತರವನ್ನು ಅಳೆಯದೆ, ಪ್ರತಿ ಮಗುವಿಗೆ ವಿಶೇಷವಾಗಿ ತಪಾಸಣೆ ಮಾಡಿಸಿ ಚಿಕಿತ್ಸೆ ನೀಡುವುದು.

9) <u>ನಿರ್ವಹಣೆ ಒಳಗೊಂಡಂತೆ ಇತರೆ ವೆಚ್ಚ:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 1,20,00 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 80,000 ದಂತೆ ಅನುದಾನ ಮಂಜೂರಾಗಿದೆ. ಈ ಅನುದಾನವನ್ನು ಅಗತ್ಯತೆಯನುಸಾರ ಈ ಕೆಳಗಿನಂತೆ ವೆಚ್ಚ ಮಾಡುವುದು.

1. ಸರ್ಕಾರಿ ಕಟ್ಟಡದಲ್ಲಿ ನಡೆಸಲಾಗುತ್ತಿರುವ ಶಾಲೆಗಳಲ್ಲಿ ಸಣ್ಣ ರಿಪೇರಿ ಕಾರ್ಯಗಳಿಗೆ ಈ ಅನುದಾನ ಬಳಕೆ ಮಾಡುವುದು.
2. ದಾಖಲೀಕರಣಕ್ಕಾಗಿ (ಫೋಟೋಗಳಿಗೆ) ಬಳಕೆ ಮಾಡಬಹುದು.
3. ಪ್ರತಿ ಕೆ.ಜಿ.ಬಿ.ವಿ ಯು ತಾನು ಕೈಗೊಳ್ಳುವ ಕಾರ್ಯಚಟುವಟಿಕೆಗಳನ್ನು ವಿವರಿಸುವ ವಾರ್ಷಿಕ ಪತ್ರಿಕೆಯನ್ನು ಹೊರತರಲು ಈ ಅನುದಾನ ಬಳಕೆ ಮಾಡಬಹುದು.
4. ದೂರವಾಣಿ, ಇಂಟರ್‌ನೆಟ್, ಫ್ಯಾಕ್ಸ್ ಇತ್ಯಾದಿಗಳನ್ನು ಅಗತ್ಯತೆಯ ಆಧಾರದ ಮೇಲೆ ಶಾಲೆಗೆ ಅಳವಡಿಸಲು ಈ ಅನುದಾನ ಬಳಕೆ ಮಾಡಬಹುದು
5. ಶೌಚಾಲಯಗಳ ಸ್ವಚ್ಛತೆಗೆ ಸ್ಕಾವೆಂಜರ್‌ಗಳನ್ನು ಗರಿಷ್ಠ ರೂ. 1000/- ಮಾಹೆಯಾನ ಸಂಭಾವನೆಯಂತೆ ನೇಮಕವನ್ನು ಮಾಡಿಕೊಳ್ಳಬಹುದು.
6. ಶೌಚಾಲಯವನ್ನು ಸ್ವಚ್ಛಗೊಳಿಸಲು ಬೇಕಾದ ಫಿನಾಯಿಲ್ ನಂತಹ ಸ್ವಚ್ಛತಾ ಸಾಮಗ್ರಿಗಳನ್ನು ಖರೀದಿಸಬಹುದು.
7. ಶಾಲೆಗೆ ಅಗತ್ಯವಾದ ಇತರೆ ಯಾವುದೇ ಕಾರ್ಯಕ್ಕೆ (ಬೇರೆ ಎಲ್ಲೂ ಅವಕಾಶ ಇಲ್ಲದಿದ್ದಾಗ) ಈ ಅನುದಾನವನ್ನು ಬಳಕೆ ಮಾಡಬಹುದಾಗಿದೆ. ಈ ಅನುದಾನವನ್ನು ಬಳಸಿಕೊಂಡು ವಿದ್ಯಾರ್ಥಿನಿಯರಿಗೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸುವುದು.

10) <u>ಪೂರ್ವ ಸಿದ್ಧತಾ ಶಿಬಿರಗಳು:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 22,500 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 15,000 ದಂತೆ ಅನುದಾನ ಮಂಜೂರಾಗಿದೆ. ಈ ಅನುದಾನವನ್ನು ವೆಚ್ಚ ಮಾಡಲು ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ/5/2011-12 ದಿನಾಂಕ: 12-04-2011 ರನ್ವಯ ವಿವರವಾದ ಮಾರ್ಗಸೂಚಿಯನ್ನು ನೀಡಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

11) <u>ಪೋಷಕ ಶಿಕ್ಷಕರ ಸಭೆ ಮತ್ತು ಶಾಲಾ ಸಮಾರಂಭಗಳು:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 22,500 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 15,000 ದಂತೆ ಅನುದಾನ ಮಂಜೂರಾಗಿದೆ. ಈ ಅನುದಾನವನ್ನು ಅಗತ್ಯತೆಯನುಸಾರ ಈ ಕೆಳಗಿನಂತೆ ವೆಚ್ಚ ಮಾಡುವುದು.

1. ಕೆ.ಜಿ.ಬಿ.ವಿಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು ಮಾಸಿಕ ನಡೆಸುವುದು. ಈ ಸಭೆಯಲ್ಲಿ ಭಾಗವಹಿಸುವ ಸದಸ್ಯರಿಗೆ ನೈಜ ಪ್ರಯಾಣ ದರವನ್ನು ನೀಡುವುದು. ಪ್ರತಿ ಸಭೆಗೆ ಕಾಫಿ, ಉಪಹಾರ ಅಥವಾ ಊಟಕ್ಕೆ ಖರ್ಚಾಗುವ ಹಣವನ್ನು ಈ ಬಾಬ್ತಿನಿಂದ ಭರಿಸಬೇಕು.
2. ವರ್ಷಕ್ಕೆ ಕನಿಷ್ಠ 3 ಬಾರಿಯಾದರೂ ಪೋಷಕರ ಸಭೆಯನ್ನು ಏರ್ಪಡಿಸಿ ಮಕ್ಕಳ ವಿಚಾರಗಳನ್ನು ಚರ್ಚಿಸುವುದರೊಂದಿಗೆ ವಿವಿಧ ಸ್ಪರ್ಧೆಗಳನ್ನು ಪೋಷಕರಿಗೆ ಏರ್ಪಡಿಸಿ, ಮಕ್ಕಳ ವಿಚಾರಗಳನು.

ಚರ್ಚಿಸುವುದರೊಂದಿಗೆ ಪೋಷಕರಿಗೆ ಶಿಕ್ಷಣದ ಮಹತ್ವವನ್ನು ತಿಳಿಯಪಡಿಸುವುದು. ಶಾಲೆಯಲ್ಲಿನ ಎಲ್ಲಾ ವಿಷಯಗಳ ಬಗ್ಗೆ ಪೋಷಕರೊಂದಿಗೆ ಚರ್ಚಿಸಿ, ಶಾಲೆಯನ್ನು ಸಮುದಾಯ ಸ್ನೇಹಿ ಮಾಡಲು ಪ್ರಯತ್ನಿಸುವುದು. ಈ ಸಭೆಗಳ ಕಲಾಪಗಳ ದಾಖಲೀಕರಣ ಮಾಡುವುದು. ಪ್ರತಿ ಸಭೆಗೆ ಕಾಫಿ, ಉಪಹಾರ ಅಥವಾ ಊಟಕ್ಕೆ ಖರ್ಚಾಗುವ ಹಣವನ್ನು ಈ ಬಾಬ್ತಿನಿಂದ ಭರಿಸಬೇಕು. ಲಭ್ಯ ಹಣಕಾಸಿನ ಮಿತಿಯಲ್ಲಿ ಪೋಷಕರ ಬಸ್ ಚಾರ್ಜ್ ಕೂಡ ನೀಡಬಹುದು.

3. ಪ್ರತಿ ಕೆ.ಜಿ.ಬಿ.ವಿ ಶಾಲೆಯಲ್ಲಿ ತಾಯಿ–ಶಿಕ್ಷಕರ ಸಮಿತಿಯನ್ನು ರಚಿಸುವುದು. ಈ ಸಮಿತಿಗೆ ತರಬೇತಿ ರೂಪದಲ್ಲಿ ಸಭೆಗಳನ್ನು ನಡೆಸಿ, ಸ್ತ್ರೀ ಸಬಲೀಕರಣ ಹಾಗೂ ಹೆಣ್ಣುಮಕ್ಕಳ ಶಿಕ್ಷಣ ಕುರಿತು ಅರಿವು ಮೂಡಿಸುವುದು.
4. ತಾಲ್ಲೂಕಿನಲ್ಲಿ ನಡೆಯುವ ಗ್ರಾಮಸಭೆಗಳಲ್ಲಿ ಹಾಜರಾಗಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳ ಬಗ್ಗೆ ಮಾಹಿತಿ ಪಡೆಯುವುದರೊಂದಿಗೆ ಈಗಾಗಲೇ ದಾಖಲಾಗಿರುವ ಹೆಣ್ಣುಮಕ್ಕಳಿಗೆ ನೀಡಲಾಗಿರುವ ಸೌಲಭ್ಯ ಹಾಗೂ ಶೈಕ್ಷಣಿಕ ಹಾಗೂ ದೈಹಿಕವಾಗಿ ಅವರಲ್ಲಿ ಉಂಟಾಗಿರುವ ಬದಲಾವಣೆಗಳ ಬಗ್ಗೆ ಮಾಹಿತಿ ನೀಡುವುದು.
5. ತಾಲ್ಲೂಕಿನಲ್ಲಿ ನಡೆಯುವ ಸಿ.ಆರ್.ಸಿ ಗಳ ಸಭೆಯಲ್ಲಿ ಅವರ ವ್ಯಾಪ್ತಿಯಲ್ಲಿನ ಶಾಲೆಯಿಂದ ಹೊರಗುಳಿದ 10+ ರಿಂದ 14 ವಯಸ್ಸಿನ ಹೆಣ್ಣು ಮಕ್ಕಳ ಬಗ್ಗೆ ಚರ್ಚಿಸಿ, ಮಾಹಿತಿಯನ್ನು ನಿರಂತರವಾಗಿ ಪಡೆಯಬೇಕು. ಅರ್ಹ ಹೆಣ್ಣು ಮಕ್ಕಳನ್ನು ಶಾಲೆಗೆ ದಾಖಲು ಮಾಡಲು ಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಲು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಿ.ಆರ್.ಸಿ ಗಳಿಗೆ ಸೂಚನೆ ನೀಡಬೇಕು.
6. ತಾಲ್ಲೂಕಿನಲ್ಲಿ ಪ್ರಮುಖ ಮಹಿಳಾ ಸಂಘಟನೆಗಳ ಸಭೆಯನ್ನು ಸೇರಿಸಿ ಯೋಜನೆ ಬಗ್ಗೆ ಚರ್ಚಿಸಿ, ಅರ್ಹ ಹೆಣ್ಣುಮಕ್ಕಳನ್ನು ಶಾಲೆಗೆ ದಾಖಲು ಮಾಡುವಲ್ಲಿ, ಶಾಲೆಗೆ ದಾಖಲಾಗುವ ಹೆಣ್ಣು ಮಕ್ಕಳಲ್ಲಿ ಮನೋಸ್ಥೈರ್ಯ ವೃದ್ಧಿಪಡಿಸಲು, ಪೋಷಕರೊಂದಿಗೆ, ಸಮಾಲೋಚನೆ ನಡೆಸಲು ಇವರ ಸೇವೆಯನ್ನು ಬಳಕೆ ಮಾಡಿಕೊಳ್ಳುವುದು.

12) <u>ಕೆ.ಜಿ.ಬಿ.ವಿ. ಕಟ್ಟಡದ ಬಾಡಿಗೆ:</u>

7 ನೂತನ ಕೆ.ಜಿ.ಬಿ.ವಿ.ಗಳಿಗೆ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 4,80,000 ದಂತೆ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು (ಉರ್ದು) ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 2,10,000 ಅನುದಾನ ಮಂಜೂರಾಗಿದೆ. ಈ ಅನುದಾನದಲ್ಲಿ ನಿಯಮಾನುಸಾರ ಬಾಡಿಗೆ ಕಟ್ಟಡ ಪಡೆದು ಬಾಡಿಗೆ ಪಾವತಿಸುವುದು.

13) <u>ಸಾಮರ್ಥ್ಯ ಅಭಿವೃದ್ಧಿ:</u>

ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ. 45,000 ದಂತೆ ಹಾಗೂ ಪ್ರವೇಶಾವಕಾಶ 100 ಇರುವ ಇತರೆ ಕೆ.ಜಿ.ಬಿ.ವಿ.ಗಳಲ್ಲಿ ಪ್ರತಿ ಕೆ.ಜಿ.ಬಿ.ವಿ.ಗೆ ವಾರ್ಷಿಕ ರೂ 30,000 ದಂತೆ ಅನುದಾನ ಮಂಜೂರಾಗಿದೆ. ಈ ಅನುದಾನವನ್ನು ಈ ಕೆಳಗಿನಂತೆ ವೆಚ್ಚ ಮಾಡುವುದು.

8. ಹೆಣ್ಣುಮಕ್ಕಳಿಗೆ ಸೈಕಲ್ ತುಳಿಯುವ ಕೌಶಲವನ್ನು ಕಲ್ಪಿಸಬೇಕಾಗಿದ್ದು, ಶಾಲೆಯಲ್ಲಿ ಸೈಕಲ್ ಖರೀದಿಯಾಗದಿದ್ದಲ್ಲಿ, ಸೈಕಲ್ ಗಳನ್ನು ಬಾಡಿಗೆಗೆ ನಿಗದಿತ ದಿನಗಳಿಗಾಗಿ ಪಡೆಯಲು ಅನುದಾನ ಬಳಕೆ ಮಾಡಬಹುದಾಗಿದೆ.
9. ಜೀವನ ಕೌಶಲ್ಯಗಳ ಹಾಗೂ ಪ್ರಮುಖವಾದ ವಿಚಾರಗಳ ಬಗ್ಗೆ ಅರಿವನ್ನು ಮೂಡಿಸಲು ಶಿಬಿರಗಳನ್ನು ಏರ್ಪಾಡು ಮಾಡಲು ಈ ಅನುದಾನದ ಬಳಕೆ ಮಾಡಬಹುದಾಗಿದೆ.
10. ಸೈಕಲ್ ಸವಾರಿ ; ಮೊಫೆಡ್ ಸವಾರಿ ಕಲಿಕೆ (ಶಾಲೆ ಆವರಣದಲ್ಲಿ ಮಾತ್ರ ಕಲಿಸಿ) ; ಸಂಗೀತ ಕಲಿಕೆ ; ಸ್ಥಳೀಯ NIIT ಯಂತಹ ಸಂಸ್ಥೆಗಳ ಸಹಯೋಗ ಸಾಧಿಸಿ ಗಣಕ ಶಿಕ್ಷಣದಲ್ಲಿ ವಿವಿಧ ಕೋರ್ಸುಗಳನ್ನು ಕಲಿಯಲು ಅವಕಾಶ ನೀಡುವುದು ; ಕನ್ನಡ ; ಹಿಂದಿ ; ಸಂಸ್ಕೃತ ಪರೀಕ್ಷೆಗೆ ಕೂರಲು ವ್ಯವಸ್ಥೆ ಮಾಡುವುದು; ಕರಾಟೆ ; ಯೋಗ ; ಈಜು ಕಲಿಕೆ ; ವ್ಯಕ್ತಿತ್ವ ಬೆಳವಣಿಗೆ ತರಬೇತಿ (ಮಂಗಳೂರಿನ ಅಭಿಯಾನಂ ಸಂಸ್ಥೆಯಂತಹ ಸಂಸ್ಥೆಗಳ ಸಹಯೋಗದಿಂದ ಸಾಧಿಸಬಹುದು) ; ನಾಟಕಾಭ್ಯಾಸ ; ನೃತ್ಯಾಭ್ಯಾಸ ಇತ್ಯಾದಿ.

11. 100 ಮಕ್ಕಳಿಗೆ ಒಂದೇ ಕಾರ್ಯಕ್ರಮ ನಡೆಸುವುದು ಯುಕ್ತವೆನಿಸದು. ಮಕ್ಕಳ ಆಯ್ಕೆಗೆ / ಐಚ್ಛಿಕ ಅಂಶಕ್ಕೆ ಅವಕಾಶ ಕಲ್ಪಿಸಿ. ಶಿಕ್ಷಕರ ಗೌರವಧನ ; ಪ್ರಯಾಣ ವೆಚ್ಚ (ಟಿ.ಎ/ಡಿ.ಎ) ; ಸಂಬಂಧಿಸಿದ ವಸ್ತುಗಳ ಖರೀದಿಗೆ ಅವಕಾಶವಿದೆ. ಇವರಿಗೆ ಮಾಹೆಯಾನ ರೂ 1,500/- ಸಂಭಾವನೆಯನ್ನು ನೀಡಬಹುದಾಗಿದೆ. ಸಂಪನ್ಮೂಲ ವ್ಯಕ್ತಿಗಳು ಜಿಲ್ಲಾ ಕೇಂದ್ರ ಅಥವಾ ತಾಲ್ಲೂಕು ಕೇಂದ್ರಗಳಿಂದ ಬಂದಲ್ಲಿ ಅವರಿಗೆ ನೈಜ ಪ್ರಯಾಣ ದರವನ್ನು ಪಾವತಿಸುವುದು. ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರತಿ ಭೇಟಿಗೆ ರೂ. 25 ಪಾವತಿಸುವುದು.
12. ಎರಡನೆಯ ಆದ್ಯತೆಯಾಗಿ ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗೆ ಕೂಡ ಈ ಹಣವನ್ನು ಬಳಕೆ ಮಾಡಬಹುದು.

<u>ಶಾಲಾ ಸಂಘಟನೆ:</u>

1) <u>ಶಿಶು ಸ್ನೇಹಿ ವಾತಾವರಣ:</u>

ಕೆ.ಜಿ.ಬಿ.ವಿ ಶಾಲೆಯಲ್ಲಿ ಮಕ್ಕಳು ಇಷ್ಟಪಡುವ ವಾತಾವರಣವನ್ನು ಸೃಷ್ಟಿಸಬೇಕು. ಹೊಸದಾಗಿ ದಾಖಲಾದ ಮಕ್ಕಳನ್ನು ಪ್ರೀತಿಯಿಂದ ಮಾತಾನಾಡಿಸಿ, ಶಾಲೆಗೆ ಹೊಂದಿಕೊಳ್ಳಲು ಅವಕಾಶ ಕಲ್ಪಿಸಬೇಕು. ಮಕ್ಕಳಿಗೆ ಸುರಕ್ಷಿತವೆನಿಸುವ ವಾತಾವರಣ ಕಲ್ಪಿಸಬೇಕು. ಮಕ್ಕಳು ತಪ್ಪು ಮಾಡಿದಾಗ, ನಯವಾಗಿ ತಪ್ಪುಗಳನ್ನು ತಿದ್ದಿಕೊಳ್ಳಲು ಅವಕಾಶ ನೀಡಬೇಕು. ಮಕ್ಕಳನ್ನು ಅನಗತ್ಯ ಶಿಕ್ಷೆಗೆ ಗುರಿಪಡಿಸಬಾರದು ಮತ್ತು ಭಯದ ವಾತಾವರಣ ಸೃಷ್ಟಿಸಬಾರದು. ಶಿಶು ಸ್ನೇಹಿ ವಾತಾವರಣದ ಸೃಷ್ಟಿಗೆ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ವಾರ್ಡನ್, ಅಡುಗೆಯವರು ಕಾರಣವಾಗಬೇಕು.

2) <u>ವಿದ್ಯಾರ್ಥಿನಿಯರ ದಾಖಲಾತಿ ಮತ್ತು ಹಾಜರಾತಿ:</u>

ಕೆ.ಜಿ.ಬಿ.ವಿ. ಗೆ ವಿದ್ಯಾರ್ಥಿನಿಯರ ದಾಖಲಾತಿಗೆ ನಿಯಮಗಳನ್ನು ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ/5/2011-12 ದಿನಾಂಕ: 12-04-2011 ರನ್ವಯ ವಿವರವಾದ ಮಾರ್ಗಸೂಚಿಯನ್ನು ನೀಡಲಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ. ವಿದ್ಯಾರ್ಥಿನಿಯರ ಪ್ರವೇಶಾವಕಾಶ 150 ಆಗಿರುವ 24 ಕೆ.ಜಿ.ಬಿ.ವಿ.ಗಳಲ್ಲಿ ದಾಖಲಾತಿ ಪೂರ್ಣ ಪ್ರಮಾಣದಲ್ಲಿ ಆಗಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ. ಇತರೆ ಎಲ್ಲಾ ಕೆ.ಜಿ.ಬಿ.ವಿ.ಗಳಲ್ಲಿ ಕಡ್ಡಾಯವಾಗಿ 100 ಅರ್ಹ ವಿದ್ಯಾರ್ಥಿನಿಯರ ದಾಖಲಾತಿಗೆ ಕ್ರಮ ಕೈಗೊಳ್ಳುವುದು. ದಾಖಲಾದ ಎಲ್ಲಾ ವಿದ್ಯಾರ್ಥಿನಿಯರು ಕೆ.ಜಿ.ಬಿ.ವಿ.ಯಲ್ಲಿ ಉಳಿದು, ಪೂರ್ಣ ಹಾಜರಾತಿಯೊಂದಿಗೆ ಶಿಕ್ಷಣವನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳುವುದು.

3) <u>ಪ್ರತಿ ವಿದ್ಯಾರ್ಥಿನಿಯ ವೈಯಕ್ತಿಕ ವಿವರ</u>

ಪ್ರತಿ ವಿದ್ಯಾರ್ಥಿನಿಯ ಹೆಸರು, ತಂದೆ, ತಾಯಿ ವಿವರ-ವಿಳಾಸ, ಕುಟುಂಬದ ಸಾಮಾಜಿಕ ಆರ್ಥಿಕ ಹಿನ್ನೆಲೆ, ಶೈಕ್ಷಣಿಕ ಸ್ಥಿತಿ, ವಿದ್ಯಾರ್ಥಿನಿಯ ಸಬಲ-ದುರ್ಬಲ ಅಂಶಗಳು ಇತ್ಯಾದಿ ವಿವರಗಳನ್ನೊಳಗೊಂಡ ವೈಯಕ್ತಿಕ ವಿವರ (child profile) ದಾಖಲೆಯನ್ನು ತಯಾರಿಸಿ, ಪ್ರತಿ ವಿದ್ಯಾರ್ಥಿನಿಯ ಹಿನ್ನೆಲೆಗೆ ತಕ್ಕಂತೆ ಪೂರಕ ಕ್ರಮಗಳನ್ನು ತೆಗೆದುಕೊಳ್ಳುವುದು.

4) <u>ಸ್ವಚ್ಛತೆ:</u>

ಕೆ.ಜಿ.ಬಿ.ವಿ. ಶಾಲೆ ಹಾಗೂ ವಸತಿ ನಿಲಯದ ವಾತಾವರಣವನ್ನು ಸ್ವಚ್ಛವಾಗಿರಿಸಬೇಕು ಮತ್ತು ಈ ನಿಟ್ಟಿನಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಮಕ್ಕಳಿಗೆ ಅಗತ್ಯ ತಿಳುವಳಿಕೆ ನೀಡಬೇಕು.

5) <u>ಆಹಾರದ ಗುಣಮಟ್ಟ:</u>

ಮಕ್ಕಳಿಗೆ ಒದಗಿಸುವ ಆಹಾರವು ನೀಡಿರುವ ಸೂಚನೆಯಂತೆ ಪ್ರಮಾಣ ಹಾಗೂ ಗುಣಮಟ್ಟದಲ್ಲಿ ಉತ್ತಮ ಮಟ್ಟವನ್ನು ಕಾಯ್ದುಕೊಳ್ಳಬೇಕು.

6) <u>ಶಾಲಾ ಪಂಚಾಂಗ:</u>

2011-12 ನೇ ಸಾಲಿನಲ್ಲಿ ಶಾಲೆ ಕೈಗೊಳ್ಳುವ ಚಟುವಟಿಕೆಗಳನ್ನು ವಿವರಿಸುವ ಶಾಲಾ ಪಂಚಾಂಗವನ್ನು ತಯಾರಿಸಬೇಕು. ಶಾಲೆಯಲ್ಲಿ ಆಚರಿಸಲಾಗುವ ವಿವಿಧ ದಿನಾಚರಣೆಗಳು, ಕಿರು ಪರೀಕ್ಷೆ, ಪರೀಕ್ಷೆ, ಸೇತುಬಂಧ, ಸಾಫಲ್ಯ ಪರೀಕ್ಷೆ, ಎಸ್.ಡಿ.ಎಂ.ಸಿ. ಹಾಗೂ ಪೋಷಕರ ಸಭೆಯ ದಿನಾಂಕಗಳು, ಕ್ಷೇತ್ರ ಭೇಟಿಯ ದಿನಾಂಕಗಳು, ಶಾಲಾ ವಾರ್ಷಿಕೋತ್ಸವ ಹಾಗೂ ಇನ್ನಿತರೆ ಕಾರ್ಯಕ್ರಮಗಳ ವಿವರವನ್ನು ಶಾಲಾ ಪಂಚಾಂಗ ಒಳಗೊಂಡಿರಬೇಕು.

7) <u>ನಿಧಾನ ಕಲಿಕೆಯ ಮಕ್ಕಳ ಕಲಿಕೆಗಾಗಿ ಪೂರಕ ಕ್ರಮಗಳು:</u>

ಶಾಲೆಯಿಂದ ಹೊರಗುಳಿದ ಮಕ್ಕಳು ಕೆ.ಜಿ.ಬಿ.ವಿ ಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುವುದರಿಂದ ಇಂತಹ ಮಕ್ಕಳು ನಿಧಾನ ಕಲಿಕೆಯವರಾಗಿರುತ್ತಾರೆ. ಇಂತಹ ಮಕ್ಕಳು ಯಾವ ವಿಷಯದ ಯಾವ ಸಾಮರ್ಥ್ಯದಲ್ಲಿ ಕಲಿಕೆಯಲ್ಲಿ ನಿಧಾನವಾಗಿದ್ದಾರೆ ಎಂಬುದನ್ನು ನೈದಾನಿಕ ಪರೀಕ್ಷೆಯ ಮೂಲಕ ಗುರುತಿಸಿ, ನಿಧಾನವಾಗಿರುವ ಸಾಮರ್ಥ್ಯಗಳನ್ನು ಗಳಿಸಲು ಅಗತ್ಯವಾದ ನಾವೀನ್ಯಯುತ ಕಲಿಕೆ-ಬೋಧನೆಯ ಚಟುವಟಿಕೆಯನ್ನು ಕೈಗೊಳ್ಳಬೇಕು. ಇದಕ್ಕಾಗಿ ಅಗತ್ಯವಾದ ಕ್ರಿಯಾ ಯೋಜನೆ ತಯಾರಿಸಿ, ಮುಂದುವರೆಯಬೇಕು.

8) <u>ಕಲಿಕಾ ಬೋಧನೆ ಸಾಮಗ್ರಿಗಳ ನಿರ್ವಹಣೆ:</u>

ನಕ್ಷೆ, ಚಿತ್ರಪಟಗಳು, ಗ್ಲೋಬ್, ವಿಜ್ಞಾನಕ್ಕೆ ಸಂಬಂಧಿಸಿದ ಮೈಕ್ರೋ ಸ್ಕೋಪ್, ಉಷ್ಣತಾ-ಮಾಪಕ, ಅಯಸ್ಕಾಂತ, ಶೃತಿಕವೆ, ದಿಕ್ಸೂಚಿ. ಮುಂತಾದ ಕಲಿಕಾ ಬೋಧನೆ ಸಾಮಗ್ರಿಗಳನ್ನು ರ್‍ಯಾಕ್‌ನಲ್ಲಿ ಸಂರಕ್ಷಿಸಿಡಬೇಕು. ಬೋಧನಾ ಸಂದರ್ಭದಲ್ಲಿ ಮಕ್ಕಳಿಗೆ ಬೋಧನಾ ಸಾಮಗ್ರಿಗಳನ್ನು ತೋರಿಸಬೇಕು ಮಕ್ಕಳೇ ಮುಟ್ಟಿ ಬಳಸುವಂತಹ ಅವಕಾಶ ಕಲ್ಪಿಸಿಕೊಡಬೇಕು. ಕಲಿಕಾ ಸಾಮಗ್ರಿಗಳ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು.

9) <u>ಗ್ರಂಥಾಲಯ</u>

ಅನಾವರ್ತಕ/ಆನಾವರ್ತಕ ಅನುದಾನದಲ್ಲಿ ಕೊಳ್ಳಲಾದ ಗ್ರಂಥಾಲಯ ಪುಸ್ತಕಗಳು ಮಕ್ಕಳಿಗೆ ವಿತರಣೆಯಾಗಬೇಕು. ಹೆಚ್ಚು ಸಾಧನೆ ಮಾಡಿರುವ ಮಹಿಳೆಯರ ಜೀವನ ಚರಿತ್ರೆ ಇರುವ ಪುಸ್ತಕಗಳನ್ನು ಮಕ್ಕಳಿಗೆ ಕೊಟ್ಟು ಓದಿಸಿ ಪ್ರೇರೇಪಿಸಬೇಕು.

10) <u>ಪ್ರಯೋಗಾಲಯ ನಿರ್ವಹಣೆ:</u>

ವಿಜ್ಞಾನಕ್ಕೆ ಸಂಬಂಧಿಸಿದ ವಸ್ತುಗಳನ್ನು ಪ್ರತ್ಯೇಕ ಕೊಠಡಿಯಲ್ಲಿ ನಿರ್ವಹಿಸಲು ಕ್ರಮ ವಹಿಸುವುದು. ವಿಜ್ಞಾನ ವಿಷಯದಲ್ಲಿ ಆಸಕ್ತಿ ಇರುವ ಶಿಕ್ಷಕರಿಗೆ ಜವಾಬ್ದಾರಿಯನ್ನು ಮುಖ್ಯ ಶಿಕ್ಷಕರು ವಹಿಸುವುದು.

11) <u>ಗಣಕ ಯಂತ್ರ:</u>

ಗಣಕಯಂತ್ರವನ್ನು ಪ್ರತ್ಯೇಕ ಕೊಠಡಿಯಲ್ಲಿ ಅಳವಡಿಸಿ, ಗಣಕ ಯಂತ್ರ ಶಿಕ್ಷಕರನ್ನು ನಿಯೋಜನೆ ಮಾಡಿ ಕೆ.ಜಿ.ಬಿ.ವಿ ಮಕ್ಕಳಿಗೆ ಗಣಕ ಯಂತ್ರ ಶಿಕ್ಷಣವನ್ನು ನೀಡಲು ಕ್ರಮ ವಹಿಸುವುದು. ಗಣಕ ಯಂತ್ರವನ್ನು ಉಪಯೋಗಿಸಿಕೊಂಡು ಶಿಕ್ಷಕರು ಮಕ್ಕಳಿಗೆ ವಿವಿಧ ವಿಷಯಗಳಾದ ಗಣಿತ, ವಿಜ್ಞಾನ, ಭಾಷೆಗಳನ್ನು ಕಲಿಸಬೇಕು. ಇದಕ್ಕಾಗಿ ಸಿ.ಎ.ಎಲ್.ಸಿ.ಶಾಲೆಗಳಲ್ಲಿ ಲಭ್ಯವಿರುವ ಕಂಪ್ಯೂಟರ್ ಪಾಠಗಳನ್ನು ಅಳವಡಿಸಿ, ಉಪಯೋಗಿಸುವುದು. ಇದಕ್ಕೆ ಅಗತ್ಯ ನೆರವನ್ನು ಡಯಟ್‌ನ ಸಿ.ಎ.ಎಲ್.ಸಿ.ಯ ನೋಡಲ್ ಅಧಿಕಾರಿಗಳು ನೀಡುವುದು.

12) <u>ಯೋಜನಾ ಕಾರ್ಯ:</u>

ಮಕ್ಕಳಿಗೆ ನಿರ್ಧಿಷ್ಟ ವಿಷಯದ ಕುರಿತು ಯೋಜನಾ ಕಾರ್ಯವನ್ನು ನೀಡುವುದು.

13) <u>ಕ್ಷೇತ್ರ ಭೇಟಿ:</u>

ವಿದ್ಯಾರ್ಥಿನಿಯರಿಗೆ ಬಾಹ್ಯ ಪ್ರಪಂಚದ ಬಗ್ಗೆ ಅನುಭವವನ್ನು ಗಳಿಸಲು ಅನುಕೂಲವಾಗಲು ಸಾಧ್ಯವಾಗುವಂತೆ ವಿವಿಧ ಕಛೇರಿಗಳಾದ ಪೋಲಿಸ್ ಠಾಣೆ, ನ್ಯಾಯಾಲಯ, ಜಿಲ್ಲಾಧಿಕಾರಿಗಳ ಕಛೇರಿ, ಶಿಕ್ಷಣ ಇಲಾಖೆಗಳ ಕಛೇರಿಗಳು, ಬ್ಯಾಂಕ್, ಅಂಚೆ ಕಛೇರಿ, ಇತ್ಯಾದಿಗಳಿಗೆ ಭೇಟಿ ಏರ್ಪಡಿಸಿ, ಅಲ್ಲಿಯ ಅಧಿಕಾರಿ/ಉದ್ಯೋಗಿಗಳೊಂದಿಗೆ ಸಂವಾದ ಏರ್ಪಡಿಸಿ, ಆ ಕಛೇರಿಗಳ ಕಾರ್ಯನಿರ್ವಹಣೆಯನ್ನು ಪರಿಚಯಿಸಬೇಕು. ಇದರಿಂದ ವಿವಿಧ ವೃತ್ತಿಗಳ ಪರಿಚಯವು ಮಕ್ಕಳಿಗೆ ಆಗುತ್ತದೆ.

14) <u>ಅತಿಥಿ ಉಪನ್ಯಾಸ, ವಿಚಾರ ಸಂಕಿರಣ:</u>

ತಜ್ಞರಿಂದ ನಿಯಮಿತವಾಗಿ ಅತಿಥಿ ಉಪನ್ಯಾಸ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.

15) <u>ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು:</u>

ಮಕ್ಕಳ ವ್ಯಕ್ತಿತ್ವದ ವಿಕಾಸಕ್ಕೆ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಅವಶ್ಯವಾಗಿದ್ದು, ನಿಯಮಿತವಾಗಿ ಈ ಚಟುವಟಿಕೆಗಳನ್ನು ಆಯೋಜಿಸುವುದು.

16) <u>ವಿದ್ಯಾಭ್ಯಾಸ ಮುಂದುವರಿಕೆ:</u>

2010–11 ನೇ ಸಾಲಿನಲ್ಲಿ ಕೆ.ಜಿ.ಬಿ.ವಿ.ಯಲ್ಲಿ 8 ನೇ ತರಗತಿ ಪೂರೈಸಿರುವ ಎಲ್ಲಾ ವಿದ್ಯಾರ್ಥಿನಿಯರನ್ನು 9 ನೇ ತರಗತಿಗೆ ದಾಖಲು ಮಾಡುವ ಜವಾಬ್ದಾರಿ ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರದ್ದಾಗಿರುತ್ತದೆ. ಇದರ ಅನುಪಾಲನೆಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೈಗೊಳ್ಳುವುದು. ಈ ಕುರಿತ ವರದಿಯನ್ನು ಮುಂದಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಂಡಿಸುವುದು.

17) <u>ಇಲಾಖೆಯ ವಿವಿಧ ಸೌಲಭ್ಯಗಳ ವಿಸ್ತರಣೆ:</u>

ಕೆ.ಜಿ.ಬಿ.ವಿ ಶಾಲೆಯನ್ನು ಒಂದು ಶಾಲೆ ಎಂದು ಪರಿಗಣಿಸಿ ಪಠ್ಯ ಪುಸ್ತಕ, ಸಮವಸ್ತ್ರ, ಸೈಕಲ್ ಹಾಗೂ ಇಲಾಖೆಯ ಇತರೆ ಸೌಲಭ್ಯಗಳಿಗೆ ಬೇಡಿಕೆಯನ್ನು ಪಡೆದು ಮಕ್ಕಳಿಗೆ ಸೌಲಭ್ಯಗಳನ್ನು ತಲುಪಿಸಲು ಕ್ರಮ ಕೈಗೊಳ್ಳುವುದು.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ

## ಅನುಬಂಧ-3

## ಕೆ.ಜಿ.ಬಿ.ವಿ.ಯಲ್ಲಿ ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳ ವೇಳಾಪಟ್ಟಿ (calender of events)

| ಕ್ರ. ಸಂ | ಚಟುವಟಿಕೆಗಳು | ಘಟಕ ವೆಚ್ಚ (ಪ್ರತಿ ಮಗುವಿಗೆ) | ಚಟುವಟಿಕೆಯ ವಿವರ | ಕಾರ್ಯ ಚಟುವಟಿಕೆಯನ್ನು ಹಮ್ಮಿಕೊಳ್ಳುವ ಕೊನೆಯ ದಿನಾಂಕ |
|---|---|---|---|---|
| 1 | ವಿದ್ಯುತ್ ಮತ್ತು ನೀರು | 0.002 | | ಸೆಪ್ಟೆಂಬರ್' 2011 |
| 2 | ಕಲಿಕೆ-ಬೋಧನೆ ಸಾಮಗ್ರಿಗಳು ಮತ್ತು ಗ್ರಂಥಾಲಯದ ಪತ್ರಿಕೆಗಳು | 0.035 | | |
| 2.1 | ಪೀಠೋಪಕರಣ ಮತ್ತು ಅಡುಗೆ ಸಾಮಾನುಗಳು | 0.005 | | ಜೂನ್' 2011 ರಿಂದ ಮಾರ್ಚ್' 2012 ರವರೆಗೆ (ಮಾಸಿಕ ರೂ. 80,000/- ದಂತೆ ವೆಚ್ಚ) |
| 2.3 | ಆಹಾರ ಪೂರೈಕೆಯ ವೆಚ್ಚವು ಮಾಸಿಕ 900/-ಕ್ಕಿಂತ ಕಡಿಮೆ ಇದ್ದು, ಉಳಿತಾಯ ಆಗುವ ವೆಚ್ಚದಲ್ಲಿ ಕೈಗೊಳ್ಳುವ ವೆಚ್ಚ | 0.108 | ವಿದ್ಯಾರ್ಥಿನಿಯರಿಗೆ ದಿನನಿತ್ಯ ಬಳಕೆ ಸಾಮಗ್ರಿಗಳಾದ ಪೌಡರ್, ಸೋಪು, ಎಣ್ಣೆ, ಬಾಚಣಿಗೆ, ಕನ್ನಡಿ, ಟೂತ್‌ಬ್ರಷ್, ಟೂತ್‌ಪೇಸ್ಟ್, ಚಪ್ಪಲಿಗಳು, ಟ್ರಂಕ್ ಇತ್ಯಾದಿಗಳನ್ನು ಖರೀದಿಸಿ, ಒದಗಿಸುವುದು. | ಸೆಪ್ಟೆಂಬರ್' 2011 ಮತ್ತು ಡಿಸೆಂಬರ್ 2011<br>(2 ಹಂತದಲ್ಲಿ: ಪ್ರತಿ ಹಂತದಲ್ಲಿ ಶೇ. 50 ರಷ್ಟು ವೆಚ್ಚ) |
| 3 | ಪ್ರತಿ ವಿದ್ಯಾರ್ಥಿನಿಗೆ ಪ್ರತಿ ತಿಂಗಳು ರೂ. 50/- ರಂತೆ ವಿದ್ಯಾರ್ಥಿವೇತನ | 0.006 | ○ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಲು<br>○ ಪ್ರವಾಸ/ಹೊರಸಂಚಾರ/ಕ್ಷೇತ್ರ ಭೇಟಿ<br>○ ಹದಿಹರೆಯದ ಜಾಗೃತಿ ಶಿಬಿರ<br>○ ಸ್ವಂತ ಊರಿಗೆ ಹೋಗಲು ಪ್ರಯಾಣ ದರ<br>○ ಇನ್ನಿತರ ಯಾವುದೇ ಆವಿಷ್ಕೃತ ಚಟುವಟಿಕೆ | ಸೆಪ್ಟೆಂಬರ್' 2011 ಮತ್ತು ಡಿಸೆಂಬರ್ 2011<br>(2 ಹಂತದಲ್ಲಿ: ಪ್ರತಿ ಹಂತದಲ್ಲಿ ಶೇ. 50 ರಷ್ಟು ವೆಚ್ಚ) |
| 4 | ಲೇಖನ ಸಾಮಗ್ರಿಗಳು ಹಾಗೂ ಇತರೆ ಶೈಕ್ಷಣಿಕ ಸಾಮಗ್ರಿಗಳು- ಪ್ರತಿ ವಿದ್ಯಾರ್ಥಿನಿಗೆ ಪ್ರತಿ ತಿಂಗಳು ರೂ.50 | 0.006 | ಪ್ರಯೋಗಾಲಯದ ರಾಸಾಯನಿಕಗಳು ; ಗಾಜಿನ ಉಪಕರಣಗಳು, ಗಣಕಯಂತ್ರದ ಕೊಠಡಿಯಲ್ಲಿ ಬಳಕೆಯಾಗುವ ಸಾದಿಲ್ವಾರು ವಸ್ತುಗಳ ಖರೀದಿ ; ಬೋಧನೋಪಕರಣಗಳು : ಗ್ರಂಥಾಲಯ ಪುಸ್ತಕಗಳು ; ನಿಯತಕಾಲಿಕೆಗಳು (Kannada/English/Urdu) ದಿನಪತ್ರಿಕೆಗಳು ; | ಸೆಪ್ಟೆಂಬರ್' 2011 |
| 5 | ಪರೀಕ್ಷಾ ಶುಲ್ಕ | 0.02 | ○ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಿ, ಮುದ್ರಿಸಲು, | ಅಕ್ಟೋಬರ್' 2011 ಮತ್ತು ಫೆಬ್ರವರಿ' 2012 |

| | | | | |
|---|---|---|---|---|
| | | | ○ ಉತ್ತರ ಪತ್ರಿಕೆಗಳನ್ನು ಖರೀದಿಸಲು | (2 ಹಂತದಲ್ಲಿ: ಪ್ರತಿ ಹಂತದಲ್ಲಿ ಶೇ. 50 ರಷ್ಟು ವೆಚ್ಚ) |
| 6 | ವೇತನ (ಘಟಕ ವೆಚ್ಚ ಕೆ.ಜಿ.ಬಿ.ವಿ) | 12.00 | ಶಿಕ್ಷಕರ ಹಾಗೂ ಇತರ ಸಿಬ್ಬಂದಿಗಳ ವೇತನ ಪಾವತಿಸಲು | ಜೂನ್' 2011 ರಿಂದ ಮಾರ್ಚ್' 2012 ರವರೆಗೆ |
| 7 | ವೃತ್ತಿ ಶಿಕ್ಷಣ ಮತ್ತು ನಿರ್ಧಿಷ್ಟ ಕೌಶಲಗಳ ಬೆಳವಣಿಗೆ | 0.005 | ವಿವಿಧ ರೀತಿಯ ವೃತ್ತಿ ಕೌಶಲಗಳ ಬೆಳವಣಿಗೆಗಾಗಿ ಅಗತ್ಯ ವಸ್ತುಗಳ ಖರೀದಿ, ಸಂಪನ್ಮೂಲ ವ್ಯಕ್ತಿಗಳ ಗೌರವಧನ ಮತ್ತು ಭತ್ಯೆಗಳ ಪಾವತಿ | ಜುಲೈ' 2011 ರಿಂದ ಫೆಬ್ರವರಿ' 2012 ವರೆಗೆ ವೆಚ್ಚ ಕೈಗೊಳ್ಳುವುದು |
| 8 | ವಿದ್ಯುತ್/ನೀರಿನ ಖರ್ಚು | 0.006 | ○ ವಿದ್ಯುತ್ ಮತ್ತು ನೀರಿನ ಬಿಲ್‌ನ ಪಾವತಿ<br>○ ನೀರು ಕಾಯಿಸಲು ಸೋಲಾರ್, ಬಾಯ್ಲರ್ ಖರೀದಿ<br>○ ನೀರಿನ ಫಿಲ್ಟರ್ ಖರೀದಿ | ಏಪ್ರಿಲ್' 2011 ರಿಂದ ಮಾರ್ಚ್' 2012 ರವರೆಗೆ (ಮಾಸಿಕ ರೂ. 5000/-ರಂತೆ ವೆಚ್ಚ) |
| 9 | ವೈದ್ಯಕೀಯ/ಇತರೆ ವೆಚ್ಚ ಪ್ರತಿ ವಿದ್ಯಾರ್ಥಿನಿಗೆ ವಾರ್ಷಿಕ ರೂ.750/- ರಂತೆ | 0.0075 | ○ ವೈದ್ಯಕೀಯ ತಪಾಸಣೆ<br>○ ವೈದ್ಯರ ಭೇಟಿಗಾಗಿ ಗೌರವಧನ<br>○ ಔಷಧಿ/ಮಾತ್ರೆಗಳು ಖರೀದಿ<br>○ ಕಬ್ಬಿಣ/ವಿಟಮಿನ್ ಮಾತ್ರೆಗಳು ಖರೀದಿ<br>○ ನ್ಯಾಪ್‌ಕಿನ್ ಖರೀದಿ<br>○ ವೈದ್ಯಕೀಯ ಶಿಬಿರ | ಜುಲೈ' 2011, ನವೆಂಬರ್' 2011, ಫೆಬ್ರವರಿ' 2011 (ಮಾಸಿಕ ರೂ. 75,000/- ವೆಚ್ಚ) |
| 10 | ನಿರ್ವಹಣೆ ಹಾಗೂ ಇತರೆ ವೆಚ್ಚ | 0.008 | ○ ಶಾಲೆಯ ಸಣ್ಣ ಪುಟ್ಟ ರಿಪೇರಿ<br>○ ದೂರವಾಣಿ, ಇಂಟರ್ ನೆಟ್, ಫ್ಯಾಕ್ಸ್ ಅಳವಡಿಕೆ ಮತ್ತು ಬಿಲ್ ಪಾವತಿ<br>○ ಶೌಚಾಲಯ ಶುಚಿಗೆ ಸ್ಕ್ಯಾವೆಂಜರ್‌ಗೆ ರೂ. 1000/- ಮಾಸಿಕ ಗೌರವಧನ<br>○ ಇನ್ನಿತರೆ ಸಂಬಂಧಿತ ವೆಚ್ಚ | ಜೂನ್' 2011 ರಿಂದ ಮಾರ್ಚ್' 2012 ರವರೆಗೆ (ಮಾಸಿಕ ರೂ. 8,000/- ವೆಚ್ಚ) |
| 11 | ಪೂರ್ವಸಿದ್ಧತಾ ಶಿಬಿರಗಳು | 0.0015 | ○ ಮಕ್ಕಳು ಶಾಲಾ ವಾತಾವರಣಕ್ಕೆ ಹೊಂದಿಕೊಳ್ಳಲು ಅಗತ್ಯ ಶಿಬಿರಗಳ ಆಯೋಜನೆಗೆ<br>○ ಶಾಲೆಗೆ ಅರ್ಹ ಮಕ್ಕಳನ್ನು ಗುರುತಿಸಲು ಗ್ರಾಮ ಸಭೆ, ಕಲಾ ಜಾಥ, ಜಾಗೃತಿ ಮೇಳ, ನಾಟಕ ಇತ್ಯಾದಿಗಳ ಆಯೋಜನೆ<br>○ ಬ್ಯಾನರ್, ಕರಪತ್ರ, ಚಿತ್ರಮಂದಿರದಲ್ಲಿ ಸ್ಲೈಡ್ ಪ್ರದರ್ಶನ, ಡಿಶ್ ಟಿ.ವಿ ಯಲ್ಲಿ ಜಾಹೀರಾತು ಪ್ರದರ್ಶನದ ಮೂಲಕ ಕೆ.ಜಿ.ಬಿ.ವಿ ಯೋಜನೆಯ ಬಗ್ಗೆ ಜಾಗೃತಿ ಮೂಡಿಸುವುದು. | ಜೂನ್' 2011 ರಿಂದ ಆಗಸ್ಟ್' 2011 ರವರೆಗೆ |

| | | | | |
|---|---|---|---|---|
| 12 | ಪೋಷಕರ ಸಭೆ ಹಾಗೂ ಶಾಲಾ ಸಮಾರಂಭಗಳು | 0.0015 | ○ ಪೋಷಕರ ಮತ್ತು ಎಸ್.ಡಿ.ಎಂ.ಸಿ.ಯ ಸಭೆ ಆಯೋಜನೆ<br>○ ಸಭೆಯ ಆಯೋಜನೆಗೆ ಅಗತ್ಯ ವೆಚ್ಚಕ್ಕಾಗಿ<br>○ ಎಸ್.ಡಿ.ಎಂ.ಸಿ ಸದಸ್ಯರಿಗೆ ನೈಜ ಪ್ರಯಾಣ ದರ ಪಾವತಿ | ಜೂನ್' 2011 ರಿಂದ ಮಾರ್ಚ್' 2012 ರವರೆಗೆ (ಮಾಸಿಕ ರೂ. 1,500/- ವೆಚ್ಚ) |
| 13 | ಬಾಡಿಗೆ (8 ತಿಂಗಳಿಗೆ) (ಘಟಕ ವೆಚ್ಚ ಕೆ.ಜಿ.ಬಿ.ವಿ) | 4.8 | ಬಾಡಿಗೆ ಪಾವತಿಸಲು | |
| 14 | ಸಾಮರ್ಥ್ಯ ಅಭಿವೃದ್ಧಿ | 0.003 | ○ ಮಕ್ಕಳ ಮತ್ತು ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗೆ ಅಗತ್ಯ ಕಾರ್ಯಕ್ರಮಗಳ ಆಯೋಜನೆ<br>○ ಸಂಪನ್ಮೂಲ ವ್ಯಕ್ತಿಗಳ ಸಂಭಾವನೆ, ಗೌರವಧನ ಪಾವತಿ<br>○ ವಿವಿಧ ರೀತಿಯ ಪರೀಕ್ಷೆಗಳಿಗೆ (ಹಿಂದಿ, ಸಂಸ್ಕೃತ, ಕನ್ನಡ, ವಚನ, ಕಂಪ್ಯೂಟರ್, ಸಂಗೀತ ಇತ್ಯಾದಿ) ವಿದ್ಯಾರ್ಥಿಗಳ ಶುಲ್ಕ ಪಾವತಿಸಲು<br>○ ಈಜು, ಕರಾಟೆ, ಸೈಕಲ್, ಯೋಗ ಇತ್ಯಾದಿಗಳ ಕಲಿಕೆಗಾಗಿ | ಜುಲೈ' 2011 ರಿಂದ ಫೆಬ್ರವರಿ' 2012 ರವರೆಗೆ (ಮಾಸಿಕ ರೂ. 3750/- ವೆಚ್ಚ) |

## ಅನುಬಂಧ–4

## ವಿದ್ಯಾರ್ಥಿನಿಯರ ದಾಖಲಾತಿ ಮತ್ತು ಹಾಜರಾತಿ ಕುರಿತು ಸಲ್ಲಿಸಬೇಕಾದ ವರದಿಗಳು

## Category wise Enrolment and Attendance:

| S. No. | District | Block | Model (I/II/ III ) | Name of Agency* | Status of KGBV (start/ not start ) | Enrollment of girls | | | | | | Total girls enrolled | Targeted Enrolment | CWSN Girls | Remarks |
|---|---|---|---|---|---|---|---|---|---|---|---|---|---|---|---|
| | | | | | | SC | ST | OBC | BPL | Minority | | | | | |
| | | | | | | | | | | Muslims | others | | | | |
| | | | | | | | | | | | | | | | |
| | | | | | | | | | | | | | | | |

| S. No. | District | Block | Model (I/II/ III ) | Name of Agency* | Status of KGBV (start/ not start ) | Attendance | | | | | | Total girls enrolled | Targeted Enrolment | CWSN Girls | Remarks |
|---|---|---|---|---|---|---|---|---|---|---|---|---|---|---|---|
| | | | | | | SC | ST | OBC | BPL | Minority | | | | | |
| | | | | | | | | | | Muslims | others | | | | |
| | | | | | | | | | | | | | | | |
| | | | | | | | | | | | | | | | |

## Class wise Enrolment and Attendance :

| S. No. | District | Block | Model (I/II/ III ) | | Class wise Enrollment | | | Total girls enrolled | Remarks |
|---|---|---|---|---|---|---|---|---|---|
| | | | | At Primary | VI | VII | VIII | | |
| | | | | | | | | | |
| | | | | | | | | | |

| S. No. | District | Block | Model (I/II/ III ) | | Class wise Attendance | | | Total girls enrolled | Remarks |
|---|---|---|---|---|---|---|---|---|---|
| | | | | At Primary | VI | VII | VIII | | |
| | | | | | | | | | |
| | | | | | | | | | |

**ಸೂಚನೆಗಳು :**

1. ಕೆ.ಜಿ.ಬಿ.ವಿ. ದಾಖಲಾತಿ ನಿಯಮಗಳ ಪ್ರಕಾರ ಎಸ್.ಸಿ, ಎಸ್.ಟಿ, ಓ.ಬಿ.ಸಿ, ಮೈನಾರಿಟಿ ವರ್ಗಗಳಿಂದ ಶೇ. 75 ರಷ್ಟು ದಾಖಲಾತಿ ಮತ್ತು ಬಿ.ಪಿ.ಎಲ್ ವರ್ಗದಿಂದ ಶೇ. 25 ರಷ್ಟು ದಾಖಲಾತಿ ಇರಬೇಕು.
2. ಎಸ್.ಸಿ, ಎಸ್.ಟಿ, ಓ.ಬಿ.ಸಿ, ಮೈನಾರಿಟಿ ವರ್ಗಗಳಿಂದ ದಾಖಲಾದ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯನ್ನು ಸಂಬಂಧಿಸಿದ ವರ್ಗಗಳಲ್ಲಿ ತೆಗೆದುಕೊಳ್ಳುವುದು.
3. ಬಡತನ ರೇಖೆಗಿಂತ ಕೆಳಗಿರುವ (ಬಿ.ಪಿ.ಎಲ್) ಕುಟುಂಬಗಳಿಂದ ದಾಖಲಾದ ಮಕ್ಕಳನ್ನು ಬಿ.ಪಿ.ಎಲ್ ಅಡಿ ಗಣನೆಗೆ ತೆಗೆದುಕೊಳ್ಳುವುದು.
4. ಕುಟುಂಬಗಳು ಕಡಿಮೆ ಆರ್ಥಿಕ ಸ್ಥಿತಿಯನ್ನು ಹೊಂದಿದ ಕಾರಣದಿಂದ ಬಿ.ಪಿ.ಎಲ್ ವರ್ಗವೆಂದು ವ್ಯಾಖ್ಯಾನಿಸುವುದರಿಂದ ಎಲ್ಲಾ ವರ್ಗಗಳು ಬಿ.ಪಿ.ಎಲ್ ಅಡಿ ಬರುವ ಸಾಧ್ಯತೆ ಇರುತ್ತದೆ. ಬಹಳಷ್ಟು ಕೆ.ಜಿ.ಬಿ.ವಿ ಯಲ್ಲಿ ಈ ವರ್ಗದಡಿ ಯಾವುದೇ ಮಕ್ಕಳನ್ನು ತೋರಿಸುತ್ತಿಲ್ಲ. 2011–12 ನೇ ಸಾಲಿನಲ್ಲಿ ಬಿ.ಪಿ.ಎಲ್ ವರ್ಗದಲ್ಲಿರುವ ಮಕ್ಕಳನ್ನು ದಾಖಲು ಮಾಡಿಕೊಳ್ಳುವುದು.
5. ಪ್ರತಿ ಬಾರಿ ವರದಿ ಮಾಡುವಾಗ ಕೆಲವು ಜಿಲ್ಲೆಗಳು ವಿದ್ಯಾರ್ಥಿನಿಯರ ದಾಖಲಾತಿಯನ್ನು ಬದಲಾಯಿಸಿ, ವರದಿ ಸಲ್ಲಿಸಲಾಗುತ್ತಿದೆ. ವರದಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.

## ಅನುಬಂಧ – ೨

## ಕೆ.ಜಿ.ಬಿ.ವಿ.ಯ ಆರ್ಥಿಕ ಪ್ರಗತಿ

| Sl. No | Activities | Unit Cost per KGBV per Year | Progress for the Previous month | Progress for the Present month | Total Progress | Remarks |
|---|---|---|---|---|---|---|
| | **Non-Recurring** | | | | | |
| 1 | Construction of Building (New) | 2.0 | | | | |
| 2 | Electricity/water charges (New) | 0.002 | | | | |
| 3 | Furniture / Equipment (including kitchen equipment) (New) | 0.03 | | | | |
| 4 | Furniture / Equipment (including kitchen equipment) (Variation on account of change of unit cost) | 0.005 | | | | |
| 5 | TLM and equipment including library books (New) | 0.035 | | | | |
| 6 | Bedding (New) | 0.0075 | | | | |
| 7 | Replacement of bedding (once in 3 years) | 0.75 | | | | |
| | **Recurring** | | | | | |
| 1 | Maintenance per girl Per month @ Rs.900/- | 0.108 | | | | |
| 2 | Stipend per girl per month @ Rs.50/- | 0.006 | | | | |
| 3 | Supplementary TLM, Stationery and other educational material | 0.006 | | | | |
| 4 | Examination Fee | 0.02 | | | | |
| 5 | Salaries | 12 | | | | |
| | Addl. Salary for HM (@ Rs. 20000/- pm, addl. Teacher (@ Rs. 15000/- pm and addl. Asstt. Cook @ Rs. 4500/- p.m. | 4.74 | | | | |
| 6 | Vocational training / specific skill training | 0.005 | | | | |
| 7 | Electricity / water charges | 0.006 | | | | |
| 8 | Medical care/contingencies @ Rs.750/- per girl. | 0.0075 | | | | |
| 9 | Maintenance Miscellaneous | 0.004 | | | | |
| 10 | Miscellaneous | 0.004 | | | | |
| 11 | Preparatory camps | 0.0015 | | | | |
| 12 | P.T.A / school functions | 0.0015 | | | | |
| 13 | Provision of Rent (8 months) | 4.8 | | | | |
| 14 | Capacity Building | 0.003 | | | | |
| | **Total Recurring** | | | | | |
| | **Grand Total (Non recurring + recurring)** | | | | | |